ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 4 । ಸಂಚಿಕೆ : 5 । ಮೇ 2022 । ಪುಟಗಳು : 20 । ಬೆಲೆ : 25/-





ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

## ಸಮಸ್ತ ಸಹಕಾರಿ ಬಂಧುಗಳಿಗೆ
## ಕಾರ್ಮಿಕ ದಿನಾಚರಣೆ, ಬಸವ ಜಯಂತಿ ಹಾಗೂ
## ಬುದ್ಧ ಪೂರ್ಣಿಮೆಯ ಶುಭಾಶಯಗಳು

ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ
ಆಡಳಿತ ಮಂಡಳಿ ಸದಸ್ಯರುಗಳು, ಕರ್ನಾಟಕ ರಾಜ್ಯ ಸಹಕಾರ
ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ
# ನೂತನ ಕಟ್ಟಡ ನಿರ್ಮಾಣಕ್ಕೆ ಪತ್ತಿನ ಸಹಕಾರ ಸಂಘಗಳಿಂದ ದೇಣಿಗೆ ಸಲ್ಲಿಕೆ



ಶ್ರೀ ಗೌರಿಗಣೇಶ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿ., ಇಲಕಲ್ಲ, ಬಾಗಲಕೋಟೆ ಈ ಸಹಕಾರ ಸಂಘದ ಆಡಳಿತಮಂಡಳಿ ಸದಸ್ಯರು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರಿಗೆ ಕಟ್ಟಡ ದೇಣಿಗೆಯ ಚೆಕ್ಕನ್ನು ನೀಡಿದರು. ಈ ಸಂದರ್ಭದಲ್ಲಿ ಪತ್ತಿನ ಸಹಕಾರ ಮಹಾಮಂಡಳದ ನಿರ್ದೇಶಕರುಗಳು ಉಪಸ್ಥಿತರಿದ್ದರು.




ನೇಕಾರರ ಪತ್ತಿನ ಸಹಕಾರ ಸಂಘ ನಿ., ನವನಗರ, ಬಾಗಲಕೋಟೆ ಈ ಸಹಕಾರ ಸಂಘದ ಆಡಳಿತಮಂಡಳಿ ಸದಸ್ಯರು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರಿಗೆ ಕಟ್ಟಡ ದೇಣಿಗೆಯ ಚೆಕ್ಕನ್ನು ನೀಡಿದರು.



ಶ್ರೀ ಓಂಕಾರ ವಿವಿಧೋದ್ದೇಶಗಳ ಸಹಕಾರ ಸಂಘ ನಿ., ಇಲಕಲ್ಲ, ಬಾಗಲಕೋಟೆ ಈ ಸಹಕಾರ ಸಂಘದ ಆಡಳಿತಮಂಡಳಿ ಸದಸ್ಯರು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರಿಗೆ ಕಟ್ಟಡ ದೇಣಿಗೆಯ ಚೆಕ್ಕನ್ನು ನೀಡಿದರು.



ಶ್ರೀ ಗಾಯತ್ರಿ ಪತ್ತಿನ ಸಹಕಾರ ಸಂಘ ನಿ., ಸೂಳೇಬಾವಿ, ಬಾಗಲಕೋಟೆ ಈ ಸಹಕಾರ ಸಂಘದ ಆಡಳಿತಮಂಡಳಿ ಸದಸ್ಯರು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರಿಗೆ ಕಟ್ಟಡದ ದೇಣಿಗೆಯ ಚೆಕ್ಕನ್ನು ನೀಡಿದರು.



ಶ್ರೀ ಲೋಕೇಶ್ವರ ಪತ್ತಿನ ಸಹಕಾರ ಸಂಘ ನಿ., ಲೋಕಾಪುರ, ಬಾಗಲಕೋಟೆ ಈ ಸಹಕಾರ ಸಂಘವು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರಿಗೆ ಕಟ್ಟಡದ ದೇಣಿಗೆಯ ಚೆಕ್ಕನ್ನು ನೀಡಿತು.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034
ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

– ಸಂಪಾದಕರು

## ಸಂಪಾದಕೀಯ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

**ಭಾರತದಲ್ಲಿ ಕೃಷಿ, ಹೈನುಗಾರಿಕೆ–ತೋಟಗಾರಿಕೆಯಂಥ ವಲಯಗಳು ಸಮಗ್ರ ಆಧುನಿಕ ಪದ್ಧತಿಯನ್ನು ಅಳವಡಿಸಿಕೊಂಡು ಮುನ್ನಡೆಯ ಕೋಟ್ಯಂತರ ಉದ್ಯೋಗಸೃಷ್ಟಿ ಸೃಜಿಸಲು ಮತ್ತಷ್ಟು ಮುಂದಾಗಬೇಕಾಗಿದೆ. ಹಾಗೂ ಹೊಸವಲಯಗಳ ಸೇರ್ಪಡೆಯ ಜೊತೆಗೆ ತಂತ್ರಜ್ಞಾನ ಅಳವಡಿಕೆಗೂ ಸಹಕಾರ ಕ್ಷೇತ್ರ ಹೆಚ್ಚುವ ಪ್ರಮಾಣದಲ್ಲಿ ತೊಡಗಿಸಿಕೊಂಡರೆ ಮುಂಬರುವ ದಿನಗಳಲ್ಲಿ ಮತ್ತಷ್ಟು ಯಶಸ್ಸುಗಳಿಸಲು ಚಿಂತನ–ಮಂಥನ ನಡೆಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಹಕಾರಿಗಳು ಹೆಚ್ಚು ಬದ್ಧತೆ ಪ್ರದರ್ಶಿಸಬೇಕಾದ ಅಗತ್ಯವಿದೆ.**

# ಹೈನೋದ್ಯಮದಲ್ಲಿ ಭಾರತ ನಂ.1





ಕಳೆದ ತಿಂಗಳು ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಗುಜರಾತ್ ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ ವಿಶ್ವದ ಹಾಲು ಉತ್ಪಾದನೆಯಲ್ಲಿ ಭಾರತ ದೇಶ ಮೊದಲ ಸ್ಥಾನದಲ್ಲಿರುವ ಬಗ್ಗೆ ಘೋಷಣೆ ಮಾಡಿದ್ದಾರೆ. ಇದು ಭಾರತೀಯರ ಪಾಲಿಗೆ ಅತ್ಯಂತ ಮಹತ್ವ ಪೂರ್ಣ ವಿಚಾರವಾಗಿದೆ. ಇತ್ತೀಚಿನ ದಿನಗಳಲ್ಲಿ ಭಾರತ ಪ್ರತಿವರ್ಷ 8.5 ಲಕ್ಷ ಕೋಟಿ ರೂಪಾಯಿಗಳ ಹಾಲು ಉತ್ಪನ್ನಗಳನ್ನು ಉತ್ಪಾದಿಸಿ ಹೊರ ರಾಷ್ಟಗಳಲ್ಲಿಯೂ ರಫ್ತು ಮಾಡುತ್ತಿರುವುದು ಜಾಗತಿಕ ಮಟ್ಟದಲ್ಲಿ ವಿಶೇಷವೆನಿಸಿದೆ.

ಗ್ರಾಮೀಣ ಜನರ ಆರ್ಥಿಕ ಬಲವರ್ಧನೆಗೆ ಹೈನುಗಾರಿಕೆ ಹೆಚ್ಚು ಪೂರಕವಾಗಿದೆ. ಇದರಿಂದ ದೇಶದ 8 ಕೋಟಿಗೂ ಅಧಿಕ ಕುಟುಂಬಗಳು ಉತ್ತಮ ಜೀವನ ನಡೆಸಲು ಸಾಧ್ಯವಾಗುವುದಲ್ಲದೇ, ರೈತರು ಉತ್ಪಾದಿಸಿದ ಕೃಷಿ ಉತ್ಪನ್ನಗಳಲ್ಲಿ ಹಲವು ಪಶುಆಹಾರವಾಗಿ ಬಳಕೆಯಾಗುತ್ತಿರುವ ಕಾರಣಗಳಿಂದ ರೈತರು ಕೃಷಿ ಉತ್ಪನ್ನಗಳ ಮಾರಾಟದಿಂದ ಆರ್ಥಿಕ ಸ್ಥಿತಿ ಉತ್ತಮಪಡಿಸಿಕೊಳ್ಳುವುದು ಸಾಧ್ಯವಾಗಿದೆ. ಈ ವ್ಯವಸ್ಥೆಯಲ್ಲಿ ಒಂದಕ್ಕೊಂದು ಸರಪಳಿಯಂತೆ ವ್ಯವಹಾರ ನಡೆಯುವ ಕಾರಣಗಳಿಂದ ಭಾರತದ ಆರ್ಥಿಕತೆ ಉತ್ತಮ ಹಾಗೂ ಬಲಿಷ್ಠಗೊಳ್ಳಲು ಸಾಧ್ಯವಾಗಿರುವುದಲ್ಲದೇ ಖಾಸಗಿ, ಸಹಕಾರಿ ವಲಯದ ಹೈನೋದ್ಯಮದಿಂದ ಕೋಟ್ಯಂತರ ಉದ್ಯೋಗ ಸೃಷ್ಠಿಯೂ ಸೃಜನೆಗೊಂಡು ಜನರು ಉತ್ತಮ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗಿದೆ. ಇದೇ ಮಾದರಿಯಲ್ಲಿ ಸಹಕಾರ ಕ್ಷೇತ್ರದ ಎಲ್ಲ ವಲಯಗಳು ಕೂಡ ದೂರದೃಷ್ಠಿ ಚಿಂತನೆಗಳಿಂದ ಮುನ್ನಡೆ ಸಾಧಿಸಿದರೆ ಸದಸ್ಯರ ಹಿತಾಸಕ್ತಿ, ಗ್ರಾಹಕ ಚಟುವಟಿಕೆಗಳ ಮೂಲಕ ಭಾರತದ ಆರ್ಥಿಕತೆಗೆ ಹೆಚ್ಚು ಕೊಡುಗೆ ನೀಡಲು ಸಾಧ್ಯವಿದೆ.

ಭಾರತದಲ್ಲಿ ಕೃಷಿ, ಹೈನುಗಾರಿಕೆ–ತೋಟಗಾರಿಕೆಯಂಥ ವಲಯಗಳು ಸಮಗ್ರ ಆಧುನಿಕ ಪದ್ಧತಿಯನ್ನು ಅಳವಡಿಸಿಕೊಂಡು ಮುನ್ನಡೆದು ಕೋಟ್ಯಂತರ ಉದ್ಯೋಗಸೃಷ್ಠಿ ಸೃಜಿಸಲು ಮತ್ತಷ್ಟು ಮುಂದಾಗಬೇಕಾಗಿದೆ. ಹೊಸವಲಯಗಳ ಸೇರ್ಪಡೆಯ ಜೊತೆಗೆ ತಂತ್ರಜ್ಞಾನ ಅಳವಡಿಕೆಗೂ ಸಹಕಾರ ಕ್ಷೇತ್ರ ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಂಡರೆ ಮುಂಬರುವ ದಿನಗಳಲ್ಲಿ ಮತ್ತಷ್ಟು ಯಶಸ್ಸುಗಳಿಸಲು ಚಿಂತನ–ಮಂಥನ ನಡೆಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸಹಕಾರಿಗಳು ಹೆಚ್ಚು ಬದ್ದತೆ ಪ್ರದರ್ಶಿಸಬೇಕಾದ ಅಗತ್ಯವಿದೆ.

ಭಾರತ ಶಾಂತಿಯ ಬೀಡು. ರಾಷ್ಟ್ರ ಕವಿ ಕುವೆಂಪು ಅವರು ಹೇಳಿರುವಂತೆ “ಸರ್ವಜನಾಂಗದ ಶಾಂತಿಯ ತೋಟ”ವಾಗಿ ಒಗ್ಗಟ್ಟು, ಸರ್ವಧರ್ಮ ಸಮಾನತೆಯ ಜೊತೆಗೆ ಸಹಕಾರ ಬಾಳ್ವೆ ನಡೆಸಿ ಬುದ್ದ–ಬಸವೇಶ್ವರರಂಥ ಮಹನೀಯರುಗಳ ಆದರ್ಶಗಳನ್ನು ಅಳವಡಿಸಿಕೊಂಡು “ಶಾಂತಿಮಂತ್ರದ ಜೊತೆಗೆ ಅಭಿವೃದ್ಧಿಮಂತ್ರ”ವನ್ನು ಪಠಿಸೋಣ. ಸಹಕಾರಿ ಬಂಧುಗಳಿಗೆ ಕಾರ್ಮಿಕ ದಿನಾಚರಣೆ, ಸಾಮಾಜಿಕ ಹರಿಕಾರ–ಮಹಾಮಾನವತಾವಾದಿಗಳಾದ ಶ್ರೀ ಬಸವೇಶ್ವರರ ಜಯಂತಿ, ಬುದ್ದ ಪೂರ್ಣಿಮೆಯ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ನೂತನ ಕಟ್ಟಡ ನಿರ್ಮಾಣ – ವೀಕ್ಷಣೆ



ಬೆಂಗಳೂರಿನ ನಂದಿನಿ ಬಡಾವಣೆಯಲ್ಲಿ ನಿರ್ಮಾಣವಾಗುತ್ತಿರುವ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಆಡಳಿತ ಕಛೇರಿಯ ಕಟ್ಟಡ ನಿರ್ಮಾಣ ಕಾರ್ಯದ ಪ್ರಗತಿಯನ್ನು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ. ದೇವೇಗೌಡ, ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ ಮತ್ತು ನಿರ್ದೇಶಕರಾದ ಶ್ರೀ ಡಿ. ಚನ್ನಯ್ಯರವರು ವೀಕ್ಷಣೆ ಮಾಡಿದರು.

**ಸುಭಾಷಿತ :** ಬೇರೆಯವರ ಬುದ್ಧಿವಾದಕ್ಕೆ ಕಿವಿಕೊಡುವ ಸದ್ಬುದ್ಧಿ ಇದ್ದರೆ ನಾವು ನಮ್ಮ ಜೀವನದಲ್ಲಿನ ಎಷ್ಟೋ ಅನಾಹುತಗಳನ್ನು ತಪ್ಪಿಸಬಹುದು. – ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

## ಕ್ಷೀರ ಕ್ರಾಂತಿಯಲ್ಲಿ ಭಾರತ ನಂ. 1

# ಹಾಲು ಉತ್ಪಾದನೆಯ ಹೆಗ್ಗಳಿಕೆ ಬಗ್ಗೆ ಪ್ರಧಾನಿ ಪ್ರಶಂಸೆ

# ಅಕ್ಕಿ, ಗೋಧಿ ವಹಿವಾಟನ್ನೇ ಹಿಂದಿಕ್ಕಿದ ಹಾಲು



**ಬನಸ್ಕಾಂತ (ಗುಜರಾತ್) :** 'ಕ್ಷೀರ ಕ್ರಾಂತಿಯ ನೇತಾರ' ಎನ್ನುವ ಹೆಗ್ಗಳಿಕೆ ಪಡೆದಿರುವ ಭಾರತಕ್ಕೆ ಈಗ ಜಗತ್ತಿನಲ್ಲಿಯೇ ಅತಿಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರ ಎನ್ನುವ ಶ್ರೇಯಸ್ಸು ದಕ್ಕಿದೆ.

ಈ ವಿಷಯವನ್ನು ಅಧಿಕೃತವಾಗಿ ಘೋಷಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, "ದೇಶದಲ್ಲಿ ವಾರ್ಷಿಕ 8.5 ಲಕ್ಷ ಕೋಟಿ ರೂ. ಮೌಲ್ಯದ ಹಾಲು ಉತ್ಪಾದನೆ ಸಾಧ್ಯವಾಗುತ್ತಿದೆ. ವಹಿವಾಟಿನ ದೃಷ್ಟಿಯಿಂದ ಅಕ್ಕಿ, ಗೋಧಿಯಂತಹ ಅತಿ ಬಳಕೆಯ ಪದಾರ್ಥಗಳನ್ನೇ ಹಾಲು ಹಿಂದಿಕ್ಕಿದೆ. ಹೈನು ವಲಯದ ಅತಿ ದೊಡ್ಡ ಲಾಭ ಸಣ್ಣ ರೈತರಿಗೆ ದಕ್ಕುತ್ತಿದೆ," ಎಂದು ಹೇಳಿದ್ದಾರೆ.

ಗುಜರಾತ್‌ನ ಬನಸ್ಕಾಂತ ಜಿಲ್ಲೆಯ ಡಿಯೋದರಾದಲ್ಲಿ ನೂತನ ಹೈನುಗಾರಿಕೆ ಸಂಕೀರ್ಣ ಉದ್ಘಾಟಿಸಿ ಮಾತನಾಡಿದ ಪ್ರಧಾನಿ ಮೋದಿ, 'ಸಹಕಾರ ಹೈನುಗಾರಿಕೆಯು ಸಣ್ಣ ರೈತರನ್ನು ಸಬಲಗೊಳಿಸಿದೆ. ಅದರಲ್ಲೂ ವಿಶೇಷವಾಗಿ ಮಹಿಳೆಯರನ್ನು ಅದು ಸ್ವಾವಲಂಬಿಗಳನ್ನಾಗಿ ಎತ್ತಿ ನಿಲ್ಲಿಸಿದೆ. ಅದರಿಂದ ಗ್ರಾಮೀಣ ಭಾಗದ ಆರ್ಥಿಕತೆಗೂ ಬಲ ಬಂದಿದೆ"ಎಂದು ಬಣ್ಣಿಸಿದರು.

"ಅತಿ ಹೆಚ್ಚು ಬಳಕೆ ಇರುವ ಅಕ್ಕಿ ಮತ್ತು ಗೋಧಿಯಂತಹ ಪದಾರ್ಥಗಳು ಕೂಡ ಉತ್ಪಾದನೆಯಲ್ಲಿ ಈಗ ಹಾಲನ್ನು ಸರಿಗಟ್ಟುತ್ತಿಲ್ಲ. ಇಷ್ಟೆಲ್ಲ ದೊಡ್ಡ ಮಟ್ಟದ ಉತ್ಪಾದನೆ ಕಾಣುತ್ತಿರುವ ಹೈನುಗಾರಿಕೆ ವಲಯ ಸಣ್ಣ ರೈತರನ್ನೇ ಕೈಹಿಡಿದು ಮುನ್ನಡೆಸುತ್ತಿದೆ. ಇದರ ಅತಿ ದೊಡ್ಡ ಲಾಭ ದಕ್ಕುತ್ತಿರುವುದು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಎನ್ನುವುದು ಖುಷಿಯ ಸಂಗತಿ," ಎಂದು ಹರ್ಷ ವ್ಯಕ್ತಪಡಿಸಿದರು.

ಜಾನುವಾರು ಪಾಲನೆ ಪೋಷಣೆಯಲ್ಲಿ ಮಹಿಳೆಯರ ಪಾತ್ರವೇ ಪ್ರಧಾನವಾಗಿದೆ. ಅವರಿಂದಲೇ ಹೈನುಗಾರಿಕೆ ಈ ಮಟ್ಟಿನ ಹೆಗ್ಗಳಿಕೆ ಸಾಧಿಸಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಹೈನುಗಾರಿಕೆಯಿಂದ ಗ್ರಾಮಗಳ ಆರ್ಥಿಕತೆ ಬಲಗೊಳ್ಳುವುದರ ಜತೆಗೆ ಸಗಣಿಯನ್ನು ಗೋಬರ್‌ಗ್ಯಾಸ್‌ಗೆ ಬಳಸುವುದರಿಂದ ವಿದ್ಯುತ್ ಉತ್ಪಾದನೆಗೂ ನೆರವಾಗುತ್ತಿದೆ. ಅದರಿಂದ ಗ್ರಾಮ ಸ್ವಚ್ಛತೆಯೂ ಸಾಧ್ಯವಾಗುತ್ತಿದೆ. ಅಂತಿಮವಾಗಿ ಇದು ಆತ್ಮನಿರ್ಭರ ಭಾರತ ಗುರಿಸಾಧನೆಗೆ ಸಾಥ್ ನೀಡಿದೆ," ಎಂದು ವಿವರಿಸಿದರು.

**ಆಮದಿನಿಂದ ರಫ್ತು ಸಾಧನೆ :** 1950ರಿಂದ 1960ರವರೆಗಿನ ಒಂದು ದಶಕ ಭಾರತದ ಹೈನುಗಾರಿಕೆ ತೀರಾ ಬಡವಾಗಿತ್ತು. ಹಾಲಿಗಾಗಿ ಆಮದನ್ನು ನೆಚ್ಚಿಕೊಳ್ಳಬೇಕಾಗಿತ್ತು. ಅಪೌಷ್ಟಿಕತೆಯಿಂದ ಬಳಲುತ್ತಿದ್ದ ಮಕ್ಕಳಿಗೆ ನೀಡಲು ಅಂದು ಹಾಲಿನ ಕೊರತೆ ಇತ್ತು. ಬಹುಪಾಲು ಪ್ರಮಾಣದ ಹಾಲನ್ನು ಸರಕಾರ ಆಮದು ಮಾಡಿಕೊಳ್ಳುತ್ತಿತ್ತು. ಈ ಕೊರತೆ 1965ರಲ್ಲಿ 'ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ'ಯನ್ನು ಸ್ಥಾಪಿಸಲಾಯಿತು.

ಆದರೆ, ಇದರಿಂದಲೂ ಹೆಚ್ಚೇನೂ ಸಾಧನೆ ಆಗಲಿಲ್ಲ. 1970ರಲ್ಲಿ 'ಆಪರೇಷನ್ ಫ್ಲಡ್' ಹೆಸರಿನಲ್ಲಿ ಕ್ಷೀರ ಉತ್ಪಾದನೆಯನ್ನು ಹೆಚ್ಚಿಸಲಾಯಿತು. ಆಗಲೂ ಹೇಳಿಕೊಳ್ಳುವ ಹೆಗ್ಗಳಿಕೆ ಆಗಲಿಲ್ಲ ಆದರೂ ಹಠ ಬಿಡದೆ ಸಾಗಿ ಬಂದ ಭಾರತದ ಹೈನುಗಾರಿಕೆ, 1998ರ ಹೊತ್ತಿಗೆ ಮೈಲುಗಲ್ಲು ತಲುಪಿತು. ಅಂದು ಅಮೆರಿಕವನ್ನು ಹಿಂದಿಕ್ಕಿದ ಭಾರತ, ಹೈನುಗಾರಿಕೆಯ ಅತಿ ದೊಡ್ಡ ರಾಷ್ಟ್ರಗಳ ಪಟ್ಟಿ ಸೇರಿತು.

2018ರ ಹೊತ್ತಿಗೆ ಜಗತ್ತಿನ ಒಟ್ಟು ಹಾಲು ಉತ್ಪಾದನೆಯ ಪ್ರಮಾಣದಲ್ಲಿ ಭಾರತದ ಪಾಲು ಶೇ.23ರಷ್ಟು ಗರಿಷ್ಠ ಮಟ್ಟಕ್ಕೆ ಜಿಗಿಯಿತು. ಅಲ್ಲಿಂದ ಇಲ್ಲಿವರೆಗೆ ದೇಶದ ಹೈನೋದ್ಯಮದ ಹಾದಿ ಏರುಗತಿಯಲ್ಲೇ ಸಾಗಿ ಬಂದಿದೆ ಎಂದು ಅವರು ವಿವರಿಸಿದರು.

### 25 ವರ್ಷಗಳ ಸಾರ್ಥಕ ಸೇವೆಯ ಸಂಭ್ರಮದಲ್ಲಿ

# ಸಹಕಾರಿಗಳ ಆರ್ಥಿಕ ಸ್ವಾವಲಂಬನೆಯ ಆಶಾಕಿರಣ ಗಾಯತ್ರಿ ಪತ್ತಿನ ಸಹಕಾರ ಸಂಘ, ಸೂಳೇಭಾವಿ



ಸಮಾನ ಮನಸ್ಕರು ಒಂದು ಗೂಡಿ "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" ಎಂಬ ಸಹಕಾರ ಧ್ಯೇಯವನ್ನು ಆದರ್ಶವಾಗಿಟ್ಟುಕೊಂಡು, ಸಮಾನತೆಯ ತಳಹದಿಯ ಮೇಲೆ ತಮ್ಮ ಮತ್ತು ತಮ್ಮ ಸುತ್ತಲಿನ ಜನ ಸಾಮಾನ್ಯರ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಾಗಿದೆ.

ಕೈಮಗ್ಗ ನೇಕಾರಿಕೆ ಜೊತೆಗೆ ಇತ್ತೀಚಿನ ದಶಕಗಳಲ್ಲಿ ಯಾಂತ್ರೀಕರಣ ಕೈಮಗ್ಗಗಳ ಸಂಖ್ಯೆ ಹೆಚ್ಚಾಗಿದೆ. ನೇಕಾರಿಕೆಯಲ್ಲಿ ಆಧುನಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ. ಕೈಮಗ್ಗ ನೇಕಾರಿಕೆ ಮಹತ್ವ ಪಡೆದಿದೆ. ಆದರೆ, ನೇಕಾರರ ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸಿಕೊಳ್ಳಲು, ಉತ್ತಮ ಜೀವನ ನಡೆಸಲು ನೆರವಾಗುವ ಉದ್ದೇಶದಿಂದ ಹಾಗೂ ಸಂಘದ ಮೇಲೆ ವಿಶ್ವಾಸ, ನಂಬಿಕೆ ಇರಿಸಿ ಬರುವ ಸದಸ್ಯರ ಆರ್ಥಿಕ ಅಗತ್ಯಗಳನ್ನು ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಸೂಳೇಭಾವಿ ಗ್ರಾಮದ ಗಾಯತ್ರಿ ಪತ್ತಿನ ಸಹಕಾರ ಸಂಘವು ಪೂರೈಸುತ್ತಾ ಸಾಗುತ್ತಿದೆ. ಆರ್ಥಿಕವಾಗಿ ಹಿಂದುಳಿದವರು, ನೇಕಾರರು, ವ್ಯಾಪಾರಿಗಳ ಜೀವನೋಪಾಯಕ್ಕಾಗಿ ಹಾಗೂ ಅವರಿಗೆ ಆರ್ಥಿಕ ಶಕ್ತಿಯನ್ನು ತುಂಬುವುದು ಜೊತೆಗೆ ಅವರಲ್ಲಿ ಉಳಿತಾಯ ಮನೋಭಾವನೆಯನ್ನು ಬೆಳೆಸುವ ಉದ್ದೇಶದಿಂದ, ಬಾಗಲಕೋಟೆ ಜಿಲ್ಲೆ ಹುನಗುಂದ ತಾಲೂಕಿನ ಸೂಳೇಭಾವಿ ಗ್ರಾಮದಲ್ಲಿ ಆರ್ಥಿಕ ಸಂಘಟನೆಯಾಗಿ 1996ರಲ್ಲಿ ಗಾಯತ್ರಿ ಪತ್ತಿನ ಸಹಕಾರ ಸಂಘವನ್ನು ಸಹೃದಯಿ ರವೀಂದ್ರ ಕಲಬುರ್ಗಿ ಅವರು ತಮ್ಮ ತಾಲೂಕಿನ ಹಿರಿಯರು, ಮಾರ್ಗದರ್ಶಕರ ನೆರವಿನಿಂದ ಆರ್ಥಿಕವಾಗಿ ಹಿಂದುಳಿದ ಜನರ ಸ್ವಾವಲಂಬಿನೆಗೆ ನೆರವಾಗಲು ಈ ಸಂಘವನ್ನು ಸ್ಥಾಪಿಸಿದರು.

1996ರಲ್ಲಿ ಪತ್ತಿನ ಸಹಕಾರ ಸಂಘ ತೆರೆಯಬೇಕು ಎಂಬ ಆಶಯದೊಂದಿಗೆ ಅಂದು ಕೇವಲ 686 ಸದಸ್ಯರೊಂದಿಗೆ ಪ್ರಾರಂಭಗೊಂಡ ಗಾಯತ್ರಿ ಪತ್ತಿನ ಸಹಕಾರ ಸಂಘ, ಇಂದು 10951 ಸದಸ್ಯರೊಂದಿಗೆ ರೂ 5.09 ಕೋಟಿ ಷೇರು ಬಂಡವಾಳ, ರೂ. 93.54 ಕೋಟಿ ಠೇವು ಹಣದೊಂದಿಗೆ ರೂ.1.49 ಕೋಟಿ ಲಾಭಗಳಿಸಿದೆ.

ಕಳೆದ 25 ವರ್ಷಗಳ ಅವಧಿಯಲ್ಲಿ ದಾಖಲೆ ಎನಿಸುವಂತೆ ಸಂಘವು 18 ಶಾಖೆಗಳನ್ನು ತೆರೆದಿದೆ. ಇಲ್ಲಿಯವರೆಗೆ ಸಂಘ ಸ್ವಂತ ಕಟ್ಟಡ ಹೊಂದಿರುವುದಿಲ್ಲ. ಇದೀಗ ಸೂಳೇಭಾವಿ ಮುಖ್ಯ ರಸ್ತೆಗೆ ಹೊಂದಿಕೊಂಡು ಆಧುನಿಕತೆಯ ತಂತ್ರಜ್ಞಾನದ ಜೊತೆಗೆ ಸುಮಾರು 2 ಕೋಟಿ ರೂ.ಗಳ ಸ್ವಂತ ಕಟ್ಟಡ ಪೂರ್ಣಗೊಂಡು ಉದ್ಘಾಟನೆಗೆ ಸಿದ್ಧವಾಗಿದೆ.

## ಸಂಘದ ಸೌಲಭ್ಯಗಳು

**ಗಣಕೀಕರಣ :** ಎಲ್ಲ ಶಾಖೆಗಳು ತಮ್ಮ ದೈನಂದಿನ ಕಾರ್ಯಗಳು ಗಣಕೀಕರಣಗೊಂಡು ಕೋರ ಬ್ಯಾಂಕಿಂಗ್ ವ್ಯವಸ್ಥೆ ಜಾರಿಗೊಳಿಸಿದೆ. ಯಾವುದೇ ಶಾಖೆಗಳಲ್ಲಿ ವ್ಯವಹಾರವನ್ನು ನಡೆಸಬಹುದು ಮತ್ತು ಮೊಬೈಲ್ ಆ್ಯಪ್ ಕೂಡಾ ಬಿಡುಗಡೆ ಮಾಡಲಾಗಿದೆ ಗ್ರಾಹಕರಿಗೆ ತ್ವರಿತ ಹಾಗೂ ಸ್ಥಳೀಯ ಸೇವೆ ಒದಗಿಸುವದು ಸಂಘದ ಮುಖ್ಯವಾಗಿದೆ.


**ಉನ್ನತ ಶಿಕ್ಷಣ ನಿಧಿ :** ಸಂಘದ ಸದಸ್ಯ ಮಕ್ಕಳಿಗೆ ಪಿಯುಸಿ ನಂತರ ಮುಂದಿನ ವ್ಯಾಸಂಗ ಮಾಡುವ ಮಕ್ಕಳಿಗೆ 2019–20ರಲ್ಲಿ ವಿಜ್ಞಾನ



ಜಗದ್ಗುರು ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾಸ್ವಾಮಿಗಳು

| ಗಾಯತ್ರಿ ಪತ್ತಿನ ಸಹಕಾರ ಸಂಘದ ಮೂರು ವರ್ಷಗಳ ಪ್ರಗತಿ ಪಕ್ಷಿನೋಟ (ರೂ. ಕೋಟಿಗಳಲ್ಲಿ) | | | |
|---|---|---|---|
| ವಿವರ | 2018–19 | 2019–20 | 31–3–2022 |
| ಸದಸ್ಯರು | 7655 | 9012 | 10951 |
| ಷೇರು ಬಂಡವಾಳ | 261.92 | 329.86 | 5.09 |
| ಠೇವಣಿ | 4099.61 | 5482.89 | 93.54 |
| ಸಾಲ ವಿತರಣೆ | 3660.70 | 4486.45 | 5709.17 |
| ಲಾಭ | 85.45 | 102.49 | 1.49 |
| ಲೆಕ್ಕಪರಿಶೋಧನೆ ಶ್ರೇಣಿ | 'ಎ' | 'ಎ' | 'ಎ' |

ವಿಭಾಗದ 20 ಇತರೆ ವಿಭಾಗದ 14 ಜನ ಯೋಜನೆಯ ಫಲಾನುಭವಿ ಒಟ್ಟು ರೂ. 1,42,000/– ಪಡೆದಿದ್ದಾರೆ.




**ಸ್ವಂತ ಕಟ್ಟಡ ಮತ್ತು ನಿವೇಶನ :** ಸಂಘವು 2 ನಿವೇಶನ ಹೊಂದಿದ್ದು ಅದರಲ್ಲಿ ಮುಖ್ಯ ಕಛೇರಿಯ ದಿನಾಂಕ : 08–08–2016 ರಂದು ಶಂಕುಸ್ಥಾಪನೆ ನೆರವೇರಿಸಲಾಯಿತು. ದಿನಾಂಕ : 05–08–2020 ರಂದು ರಾಮಮಂದಿರ ಕಟ್ಟಡದ ದಿವ್ಯ ಮುಹೂರ್ತದಂದು ಸಂಘದ ಕಟ್ಟಡವನ್ನು ಪ್ರಾರಂಭಿಸಿ ಏಪ್ರಿಲ್ 29 ರಂದು ಬೆಳ್ಳಿ ಹಬ್ಬದ ನಿಮಿತ್ಯ ಉದ್ಘಾಟನೆ ಮಾಡಲಾಗಿದೆ.

**ಇ–ಸ್ಟಾಂಪ್ ಬಾಂಡ್ :** ಹುನಗುಂದ ತಾಲೂಕಿನ ಅಮೀನಗಡದಲ್ಲಿ ಕುಷ್ಟಗಿ ತಾಲೂಕಿನ ದೋಟಿಹಾಳ ಹಾಗೂ ಹನಮಸಾಗರ ಶಾಖೆಗಳಲ್ಲಿ ಹಾಗೂ ಗದಗ ಜಿಲ್ಲೆಯ ಗಜೇಂದ್ರಗಡ ನಗರದಲ್ಲಿ ಇ–ಸ್ಟಾಂಪ್ ಬಾಂಡ್ ಪೇಪರ್ ಲಭ್ಯವಿದೆ.

**ಎನ್.ಇ.ಎಫ್.ಟಿ./ ಆರ್.ಟಿ.ಜಿ.ಎಸ್.:** ಸಂಘದಿಂದ ಯಾವುದೇ ಖಾತೆಗೆ ಹಣ ವರ್ಗಾವಣೆ ಸೌಲಭ್ಯವನ್ನು ಒದಗಿಸಲಾಗಿದೆ. ಈ ಮೊದಲು ಸಂಘದ ಖಾತೆಯಿಂದ ವರ್ಗಾವಣೆಯಾಗುತ್ತಿತ್ತು. ಆದರೆ ಸದರಿ ವರ್ಷದಿಂದ ಗ್ರಾಹಕರಿಂದ ನೇರವಾಗಿ ವರ್ಗಾವಣೆ ಮಾಡಬಹುದು. ಸಂಘದ ಗ್ರಾಹಕರ ಖಾತೆಗೆ ಕೂಡಾ ಜಮಾ ಆಗುತ್ತದೆ.

**ಮೊಬೈಲ್ ಬ್ಯಾಂಕಿಂಗ್ :** ಇಂದಿನ ದೈನಂದಿನ ಜೀವನದಲ್ಲಿ ಮತ್ತು ಸಮಾಜದಲ್ಲಿ ಬದುಕಲು ತಂತ್ರಜ್ಞಾನದ ಅಗತ್ಯತೆ ಇದೆ. ಗಾಯತ್ರಿ ಸಂಘವು ಗ್ರಾಮೀಣ ಪ್ರದೇಶದ ಗ್ರಾಹಕರ ಅನುಕೂಲಕ್ಕಾಗಿ ಮೊಬೈಲ್ ಆ್ಯಪ್‌ನ ಸೇವೆಗಳನ್ನು ಒದಗಿಸಿದೆ. ಸಂಘದ ಸದಸ್ಯರ ಅನುಕೂಲಕ್ಕಾಗಿ ಮೊಬೈಲ್ ಸೇವೆಯ ಸೌಲಭ್ಯವನ್ನು ಒದಗಿಸಲಾಗಿದೆ. ಇದರಿಂದ ಹಣ ವರ್ಗಾವಣೆ, ಮೊಬೈಲ್ ರಿಚಾರ್ಜ, ವಿದ್ಯುತ್ ಬಿಲ್ಲು ಹಾಗೂ ಇತರೆ ಬಿಲ್ಲುಗಳನ್ನು ತುಂಬಲು ಸಹಕಾರಿಯಾಗಿದೆ. ಇದರೊಂದಿಗೆ ಗ್ರಾಹಕರ ಸೇವೆಯೇ ತನ್ನ ಪ್ರಥಮ ಆಧ್ಯತೆಯಾಗಿಸಿಕೊಂಡಿರುವ ಸಂಸ್ಥೆಯಿಂದ QR CODE ವ್ಯವಸ್ಥೆ ಹೊಂದಿದೆ.

**ಗಾಯತ್ರಿ ಸಂಘದ ಶಾಖೆಗಳು :** ಗಾಯತ್ರಿ ಪತ್ತಿನ ಸಹಕಾರ ಸಂಘವು ಈಗಾಗಲೇ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕು ಸೂಳೇಭಾವಿಯಲ್ಲಿ ಕೇಂದ್ರ ಕಚೇರಿ ಹೊಂದಿದ್ದು ಐಹೊಳೆ, ಧನ್ನೂರ, ನಾಗೂರ, ಬೆಳಗಲ್, ಗುಡೂರ ಹಾಗೂ ಅಮೀನಗಡ, ಬಾದಾಮಿ ತಾಲೂಕಿನ ಬದಾಮಿ, ಗದಗ ಜಿಲ್ಲೆಯ ಗಜೇಂದ್ರಗಡ, ಕುಷ್ಟಗಿ ತಾಲೂಕಿನ ಕುಷ್ಟಗಿ, ಹನಮಸಾಗರ, ದೋಟಿಹಾಳ, ಯಲಬುರ್ಗಾ ತಾಲೂಕಿನ ಯಲಬುರ್ಗಾ ವಿಜಯಪುರ ಜಿಲ್ಲೆಯ ನಿಡಗುಂದಿ ಹಾಗೂ ರೋಣ ತಾಲ್ಲೂಕ ರೋಣ, ನರೇಗಲ್ಲ, ನರಗುಂದ ತಾಲೂಕು ಶಿರೋಳ ಹಾಗೂ ಗದಗ–ಬೆಟಗೇರಿಯಲ್ಲಿ ಶಾಖೆಗಳನ್ನು ಹೊಂದಿರುವುದನ್ನು ನೋಡಿದರೆ, ಸಂಘದ ಆಡಳಿತ ಮಂಡಳಿಯ ಬದ್ಧತೆ, ನೌಕರ ವರ್ಗದವರ ದಕ್ಷತೆ ಹಾಗೂ ಸದಸ್ಯರು ಸಂಘದ ಜತೆ ಹೊಂದಿರುವ ಒಡನಾಟ ಇವೆಲ್ಲವು ಸಂಘದ ಪ್ರಗತಿದಾಯಕ ಕ್ಷೇತ್ರದ ವಿಸ್ತರಣೆ ತೋರಿಸುತ್ತದೆ.

ವಿವಿಧ ಜಿಲ್ಲೆಗಳಲ್ಲಿ ಸ್ಥಾಪಿತವಾದ ಈ ಎಲ್ಲ ಶಾಖಾ ಕಛೇರಿಗಳಿಂದ ಆಯಾ ಭಾಗಗಳಲ್ಲಿ ಬಡವರು, ವ್ಯಾಪಾರಿಗಳು, ನೇಕಾರರು, ಜವಳಿ ವ್ಯಾಪಾರಸ್ಥರು, ಸಂಘದ ಮೂಲಕ ತಮ್ಮ ಆರ್ಥಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.



**ಶ್ರೀ ರವೀಂದ್ರ ಪಿ. ಕಲಬುರ್ಗಿ**
**ಸಂಸ್ಥಾಪಕ ಅಧ್ಯಕ್ಷರು**
**ನಿರ್ದೇಶಕರು, ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ ನಿ., ಬೆಂಗಳೂರು. ಮಾಜಿ ಅಧ್ಯಕ್ಷರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ., ಬೆಂಗಳೂರು**

## ಗಾಯತ್ರಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ






## ಕೋರ್ ಬ್ಯಾಂಕಿಂಗ್ ಪ್ರಾರಂಭ

ಜನಹಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಈ ಸಹಕಾರ ಸಂಘವು ತನ್ನ ಸದಸ್ಯರಿಗೆ ಕೋರ್ ಬ್ಯಾಂಕಿಂಗ್ ಹಾಗೂ ಮೊಬೈಲ್ ಆಪ್ ವ್ಯವಸ್ಥೆಯನ್ನು ಸಮರ್ಪಿಸಿದರು. ಅದರ ಉದ್ಘಾಟನಾ ಸಮಾರಂಭದಲ್ಲಿ ಸಹಕಾರ ಸಂಘದ ಅಧ್ಯಕ್ಷರು, ಎಂ. ಶ್ರೀನಿವಾಸ್, ಉಪಾಧ್ಯಕ್ಷರು, ಉಮೇಶ್ ಬಾಬು ಹಾಗೂ ನಿರ್ದೇಶಕರಾದ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ, ಆಡಳಿತಮಂಡಳಿ ಸದಸ್ಯರು, ಗಗನ ಕೆ. ಸಹಾಯಕ ನಿಬಂಧಕರು, ಶಶಿಕಲಾ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದ ಸಂದರ್ಭ.

# ದೇಶದ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡ ಕಾರ್ಮಿಕ ಶಕ್ತಿಗೆ ನಮಿಸೋಣ

**ಮಂಜುನಾಥ್ ನಾಯ್ಕ್**, ಹಿರಿಯ ಪತ್ರಕರ್ತರು.

ಯಾವುದೇ ದೇಶ ಎಲ್ಲಾ ಕ್ಷೇತ್ರಗಳಲ್ಲಿ ಸರ್ವತೋಮುಖವಾಗಿ ಸಮಗ್ರ ಅಭಿವೃದ್ಧಿ ಸಾಧಿಸಲು ಆ ದೇಶದಲ್ಲಿರುವ ಗುಣಮಟ್ಟದ ಹಾಗೂ ಕೌಶಲ್ಯದಿಂದ ಕೂಡಿದ ಕಾರ್ಮಿಕ ಶಕ್ತಿಯ ಪಾತ್ರ ಮಹತ್ವವಾದದ್ದು. ಈ ಕಾರ್ಮಿಕ ಶಕ್ತಿಗೆ ಇಂದು ಮಾನವ ಸಂಪನ್ಮೂಲ ಎಂದು ಹೊಸ ಹೆಸರು ನೀಡಲಾಗಿದೆ. ವಿವಿಧ ಕ್ಷೇತ್ರದಲ್ಲಿ ತರಬೇತಿ ಪಡೆದ ಸದೃಢ ಆರೋಗ್ಯವಂತ ಕಾರ್ಮಿಕ ಶಕ್ತಿಯಿಂದಲೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹೊಂದುವ, ಮೂಲಕ ಜಗತ್ತಿನ ಸುಪರ್ ಪವರ್ ಆಗಬಹುದು.

ಭಾರತ ಜಗತ್ತಿನಲ್ಲಿ ದೊಡ್ಡ ಸಂಖ್ಯೆಯ ಮಾನವ ಸಂಪನ್ಮೂಲ ಹೊಂದಿರುವ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ದುಡಿಯುವ ಕೈಗಳಿಗೆ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ದಿನ ನಮನ ಸಲ್ಲಿಸೋಣ.

ಹಗಲು ರಾತ್ರಿ ಎಂದು ನೋಡುವುದಿಲ್ಲ, ಬಿಸಿಲು ಮಳೆ ಗಾಳಿಗೂ ಜಗ್ಗುವುದಿಲ್ಲ, ಕಠಿಣ ಪರಿಶ್ರಮ, ಸಮರ್ಪಣಾ ಭಾವಕ್ಕೆ ಇವರು ಸಾಕ್ಷಿ... ಕಷ್ಟವನ್ನು ನುಂಗಿ ಖುಷಿ ಹಂಚುವವರು ಕಾರ್ಮಿಕರು... ದೇಶ ಕಟ್ಟುವಲ್ಲಿ ಕಾರ್ಮಿಕರ ಪಾತ್ರ ಬಹಳ ಹಿರಿದು. ಕಾರ್ಮಿಕರ ಶ್ರಮದಲ್ಲಿ ದೇಶದ ಅಭಿವೃದ್ಧಿಯಡಗಿದೆ... ಈ ಶ್ರಮಜೀವಿಗಳೇ ಇಲ್ಲದ ದೇಶವನ್ನು ಊಹಿಸಲು ಸಾಧ್ಯವಿದೆಯೇ...? ಖಂಡಿತಾ ಇಲ್ಲ. ತಮ್ಮ ದುಡಿಮೆಯಿಂದಲೇ ತಮ್ಮ ಕುಟುಂಬವನ್ನು ಮುನ್ನಡೆಸುವ ಕಾರ್ಮಿಕರು ತಾವು ದುಡಿಯುತ್ತಿರುವ ಸಂಸ್ಥೆಯ ಬೆಳವಣಿಗೆಗೂ ಕಾರಣವಾಗುತ್ತಾರೆ.

ಇಂತಹ ಶ್ರಮಜೀವಿಗಳ ಕೆಲಸವನ್ನು ಗೌರವಿಸುವ, ಇವರ ಶ್ರಮವನ್ನು ಗುರುತಿಸುವ, ಇವರ ಕಷ್ಟಗಳನ್ನು ಸ್ಮರಿಸುವ ಸಲುವಾಗಿ ಮೇ. 1 ರಂದು ಅಂತಾರಾಷ್ಟ್ರೀಯ ಕಾರ್ಮಿಕರ ದಿನ ಎಂದು ಆಚರಿಸಲಾಗುತ್ತದೆ. ಇದನ್ನು ವರ್ಕರ್ಸ್ ಡೇ, ಮೇ ಡೇ, ಲೇಬರ್ ಡೇ ಎಂದೂ ಕರೆಯಲಾಗುತ್ತದೆ. 1886ರಲ್ಲಿ ಅಮೇರಿಕಾದಲ್ಲಿ ಮೊದಲ ಬಾರಿಗೆ ಕಾರ್ಮಿಕರ ದಿನವನ್ನು ಆಚರಿಸಲಾಯಿತು. ದಿನಕ್ಕೆ ಕಾರ್ಮಿಕರಿಗೆ ಎಂಟು ಗಂಟೆ ಕೆಲಸದ ಅವಧಿಯನ್ನು ನಿಗದಿ ಮಾಡಬೇಕು ಎಂಬ ಆಗ್ರಹದೊಂದಿಗೆ ಶುರುವಾದ ಚಳವಳಿಗೆ ಯಶಸ್ಸು ಸಿಕ್ಕಿತ್ತು. ಇದೇ ಹೋರಾಟದ ಕಿಚ್ಚಿನಲ್ಲಿ ಉದಯಿಸಿದ್ದೇ ಕಾರ್ಮಿಕರ ದಿನಾಚರಣೆ. ಭಾರತದಲ್ಲಿ ಈ ಆಚರಣೆ ಶುರುವಾಗಿದ್ದು 1923ರಲ್ಲಿ. ವಿಶ್ವದ ನಾನಾ ಭಾಗಗಳಲ್ಲಿ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ಮೂಲಕ ಶ್ರಮಜೀವಿಗಳಿಗೆ ಕೃತಜ್ಞತೆ ಸಲ್ಲಿಸಲಾಗುತ್ತದೆ. ಹೀಗಾಗಿ, ಈ ದಿನದಂದು ಎಲ್ಲಾ ಶ್ರಮಜೀವಿಗಳಿಗೆ ಕಳುಹಿಸಿಕೊಡುವಂತಹ ಶುಭ ಸಂದೇಶಗಳು ಇಲ್ಲಿವೆ.

- ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಭಾವದಿಂದ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಗೌರವ ಸಲ್ಲಿಸುವ ದಿನ ಇದು.



**ಹಗಲು ರಾತ್ರಿ ಎಂದು ನೋಡುವುದಿಲ್ಲ, ಬಿಸಿಲು ಮಳೆ ಗಾಳಿಗೂ ಜಗ್ಗುವುದಿಲ್ಲ, ಕಠಿಣ ಪರಿಶ್ರಮ, ಸಮರ್ಪಣಾ ಭಾವಕ್ಕೆ ಇವರು ಸಾಕ್ಷಿ... ಕಷ್ಟವನ್ನು ನುಂಗಿ ಖುಷಿ ಹಂಚುವವರು ಕಾರ್ಮಿಕರು... ದೇಶ ಕಟ್ಟುವಲ್ಲಿ ಕಾರ್ಮಿಕರ ಪಾತ್ರ ಬಹಳ ಹಿರಿದು. ಕಾರ್ಮಿಕರ ಶ್ರಮದಲ್ಲಿ ದೇಶದ ಅಭಿವೃದ್ಧಿಯಡಗಿದೆ... ಈ ಶ್ರಮಜೀವಿಗಳೇ ಇಲ್ಲದ ದೇಶವನ್ನು ಊಹಿಸಲು ಸಾಧ್ಯವಿದೆಯೇ...? ಖಂಡಿತಾ ಇಲ್ಲ. ತಮ್ಮ ದುಡಿಮೆಯಿಂದಲೇ ತಮ್ಮ ಕುಟುಂಬವನ್ನು ಮುನ್ನಡೆಸುವ ಕಾರ್ಮಿಕರು ತಾವು ದುಡಿಯುತ್ತಿರುವ ಸಂಸ್ಥೆಯ ಬೆಳವಣಿಗೆಗೂ ಕಾರಣವಾಗುತ್ತಾರೆ.**

- ದೇಶದ ಅಭಿವೃದ್ಧಿಗೆ ನಿರಂತರ ಸೇವೆ ಸಲ್ಲಿಸುತ್ತಿರುವ ಶ್ರಮಜೀವಿಗಳೇ ದೇಶದ ನಿಜವಾದ ಆಸ್ತಿ.
- ಒಬ್ಬ ಕಾರ್ಮಿಕ ಅದ್ಭುತಗಳ ನಿರ್ಮಾತೃ ಮತ್ತು ಪ್ರತಿ ರಾಷ್ಟ್ರಕ್ಕೂ ದೊಡ್ಡ ಆಸ್ತಿ.
- ದುಡಿಮೆ ಮನುಷ್ಯನ ಘನತೆ ಮತ್ತು ಸೃಜನಶೀಲತೆಯ ಶ್ರೇಷ್ಠತೆಯನ್ನು ವ್ಯಕ್ತಪಡಿಸುವ ಏಣಿ.
- ಜೀವನದ ಕಠಿಣ ಸವಾಲುಗಳನ್ನೂ ಮೆಟ್ಟಿ ನಿಂತು ಪರಿಶ್ರಮದಲ್ಲಿಯೇ ಬದುಕಿನ ಖುಷಿ ಕಾಣುವ ಎಲ್ಲ ಕಾರ್ಮಿಕರೆ ದೇಶದ ನಿಜವಾದ ಆಸ್ತಿ
- ಕಾರ್ಮಿಕರೇ ಈ ದೇಶದ ಆಸ್ತಿ. ಕಾರ್ಮಿಕರೇ ಕಠಿಣ ಪರಿಶ್ರಮಕ್ಕೆ ಸ್ಫೂರ್ತಿ. ಕಾರ್ಮಿಕರ ದುಡಿಮೆಯಲ್ಲಡಗಿದೆ ದೇಶದ ಅಭಿವೃದ್ಧಿ.


2020–21ನೇ ಸಾಲಿನಲ್ಲಿ ರಾಷ್ಟ್ರೀಯ ಅಂಕಿ ಅಂಶಗಳ ಕಛೇರಿ (National Statistical Office) ಯು ನಡೆಸಿದ ಸಮೀಕ್ಷೆಯ ಪ್ರಕಾರ ಭಾರತದಾದ್ಯಂತ ಸುಮಾರು 38 ಕೋಟಿಗೂ ಅಧಿಕ ಕಾರ್ಮಿಕರು ಅಸಂಘಟಿತ ವರ್ಗಗಳಲ್ಲಿ ತೊಡಗಿಕೊಂಡಿರುತ್ತಾರೆ. ಪ್ರಸ್ತುತ

ಅಸಂಘಟಿತ ಕಾರ್ಮಿಕರ ಕೇಂದ್ರಕೃತ ದತ್ತಾಂಶ ಲಭ್ಯವಿರುವುದಿಲ್ಲ. ಅಂತಹ ಕೇಂದ್ರೀಕೃತ ದತ್ತಾಂಶದ ಅಲಭ್ಯತೆಯ ಕಾರಣ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ, ವಲಸೆ ಕಾರ್ಮಿಕರು ಹಾಗೂ ಕಟ್ಟಡ ಕಾರ್ಮಿಕರು ಸೇರಿದಂತೆ ಅಸಂಘಟಿತ ವರ್ಗಗಳ ಕಾರ್ಮಿಕರಿಗೆ ಸಂಬಂಧಿಸಿದ ಸಮಸ್ಯೆಗಳ ನಿವಾರಣೋಪಾಯ ಕಲ್ಪಿಸುವುದು ಕಷ್ಟ ಸಾಧ್ಯವಾಗಿರುತ್ತದೆ. ಅಸಂಘಟಿತ ಹಾಗೂ ವಲಸೆ ಕಾರ್ಮಿಕರ ಸಮಗ್ರ ದತ್ತಾಂಶವು ಅವರಿಗೆ ಸಾಮಾಜಿಕ ಭದ್ರತಾ ಯೋಜನೆಗಳನ್ನು ವಿಸ್ತರಿಸಲು ಸಹಾಯಕವಾಗಿರುತ್ತದೆ. ಕಾರ್ಮಿಕ ವರ್ಗಗಳಲ್ಲಿ ಅತ್ಯಂತ ದುರ್ಬಲ ವರ್ಗದವರಾದ ವಲಸೆ ಕಾರ್ಮಿಕರು ಸೇರಿದಂತೆ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಅಸಂಘಟಿತ ಕಾರ್ಮಿಕರ ರಾಷ್ಟ್ರೀಯ ಸಮಗ್ರ ದತ್ತಾಂಶವನ್ನು ಸಿದ್ದಪಡಿಸಲು ಇಲಾಖೆ ಕ್ರಮ ಕೈಗೊಂಡಿದೆ.

### 2050 ನಂತರ ಭಾರತದ ಕಾರ್ಮಿಕರ ಸಂಖ್ಯೆಯಲ್ಲಿ ಇಳಿಕೆ

ಭಾರತದ ಜನಸಂಖ್ಯೆಯನ್ನು 0–14, 15–24, 25–59, 60 ಮೇಲ್ಪಟ್ಟ ವಯಸ್ಸು ಎಂದು ವಿಭಾಗಿಸಿ ನೋಡಿದಾಗ ಭಾರತ 2050ರವರೆಗೆ ಹೆಚ್ಚಿನ ಪ್ರಮಾಣದಲ್ಲಿ ದುಡಿಯುವ ವರ್ಗವನ್ನು ಹೊಂದಲಿದೆ. ಆದರೆ 2050ರ ಬಳಿಕ ದುಡಿಯುವ ವರ್ಗದ ಪ್ರಮಾಣ ಕಡಿಮೆಯಾಗಲಿದೆ. ಇದು ಪ್ರಸಕ್ತ ಯುರೋಪ್ ಎದುರಿಸುತ್ತಿರುವ ದುಡಿಯುವ ವರ್ಗದ ಕಡಿಮೆ ಅನುಪಾತಕ್ಕೆ ತಾಳೆಯಾಗಲಿದೆ. ಭವಿಷ್ಯದಲ್ಲಿ ಇದು ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಈ ಬಗ್ಗೆ ಆರ್ಥಿಕ ತಜ್ಞರು ಚಿಂತನೆ ನಡೆಸಬೇಕಿದೆ.

ಸಾಮಾನ್ಯವಾಗಿ ದುಡಿಯುವ ವರ್ಗದ ಜನರಲ್ಲಿ 40–45 ವರ್ಷದವರೆಗೆ ಹೆಚ್ಚಿನ ಉಳಿತಾಯ ಇರುತ್ತದೆ. ಬಳಿಕ ಉಳಿತಾಯದ ಪ್ರಮಾಣ ಕಡಿಮೆಯಾಗುತ್ತದೆ. ಯುರೋಪ್ ದೇಶಗಳಲ್ಲಿ ಬಹುತೇಕ 60 ವರ್ಷದ ಬಳಿಕ ದುಡಿಮೆ ನಿಂತು ಹೋಗುತ್ತದೆ. ಆದರೆ ಭಾರತದಲ್ಲಿ ಬಹುತೇಕ ಜನರು ಕೃಷಿಯನ್ನು ಅವಲಂಬಿಸಿರುವ ಕಾರಣ ದುಡಿಮೆ 80–90 ವರ್ಷದವರೆಗೂ ಇರುತ್ತದೆ.



ಭಾರತದಲ್ಲಿ ಕಾರ್ಮಿಕರನ್ನು ಸಂಘಟಿತ ಕಾರ್ಮಿಕರು ಹಾಗೂ ಅಸಂಘಟಿತ ಕಾರ್ಮಿಕರೆಂದು ವಿಭಾಗಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸ್ವಾಮ್ಯದ ಅಡಿ ದುಡಿಯುವ ಕಾರ್ಮಿಕರು ಬಹುತೇಕ ಸಂಘಟಿತ ಕಾರ್ಮಿಕರಾಗಿದ್ದು, ದೇಶದಲ್ಲಿ ಕೇವಲ ಪ್ರತಿಶತ 12 ರಿಂದ 15 ರವರೆಗೆ ಮಾತ್ರ ಕಂಡು ಬಂದಿದ್ದು ತಮ್ಮ ಸಂಘಟಿತ ಹೋರಾಟದ ಮೂಲಕ ಬೇಡಿಕೆಗಳನ್ನು ತಕ್ಕ ಮಟ್ಟಿಗೆ ಈಡೇರಿಸಿಕೊಳ್ಳುತ್ತಿದ್ದರೆ.

ಇನ್ನೂಳಿದ ಶೇ 85 ರಷ್ಟು ಕಾರ್ಮಿಕರು, ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಭೂ ರಹಿತ ಮಹಿಳೆ ಹಾಗೂ ಪುರುಷ ಕಾರ್ಮಿಕರು ನಗರಗಳಲ್ಲಿ ಹೋಟೆಲ್‌ಗಳಲ್ಲಿ ದುಡಿಯುವ ಕಾರ್ಮಿಕರು, ಸಣ್ಣ ಉದ್ದಿಮೆಗಳಲ್ಲಿ ದುಡಿಯುವವರು, ಈ ಮುಂತಾದ ಕ್ಷೇತ್ರಗಳಲ್ಲಿ ದುಡಿವ ಕೆಲಸಗಾರರು ಅಸಂಘಟಿತ ಕಾರ್ಮಿಕರು. ಇವರಿಗೆ ಮೂಲತಃ ನಿರ್ದಿಷ್ಟ ಕೂಲಿ ಎಂಬದೇ ಗಗನ ಕುಸುಮವಾಗಿದ್ದು ತೀವ್ರತರ ಶೋಷಣೆಗೆ ಒಳಪಟ್ಟಿದ್ದಾರೆ.

ಇಂತಹ ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು ಸ್ವಾತಂತ್ರ ನಂತರ ಕೇಂದ್ರ ಸರ್ಕಾರ 1949ರಲ್ಲಿ ಕನಿಷ್ಠ ಕೂಲಿ ಕಾಯ್ದೆಯನ್ನು ಜಾರಿಗೆ ತಂದಿದ್ದು, ಆ ಕಾಯ್ದೆಯು ಬಹುತೇಕವಾಗಿ ಹಲ್ಲಿಲ್ಲದ ಕಾಯ್ದೆಯಾಗಿದ್ದು ಪರಿಪೂರ್ಣವಾಗಿ ಜಾರಿಯಲ್ಲಿ ತರಲು ಸಾಧ್ಯವಾಗಿಲ್ಲ.

ಒಟ್ಟಾರೆ ಭಾರತದಲ್ಲಿ ಕಾರ್ಮಿಕರು ಶೋಷಣೆಯಲ್ಲೇ ಬದುಕು ಸಾಗಿಸುತ್ತಿದ್ದು ಶ್ರೀಮಂತರು ಶ್ರೀಮಂತರಾಗಿಯೇ ಮಂದುವರೆದರೆ ಬಡವರು ಬಡವರಾಗಿಯೇ ಸಾಗುತ್ತಿದ್ದಾರೆ. ಇಂತಹ ಶೋಷಣೆಯ ವಿರುದ್ಧ ಕಾರ್ಮಿಕ ಒಕ್ಕೂಟಗಳಲ್ಲಿ ಐಕ್ಯತೆಯನ್ನು ಕಾಪಾಡಿಕೊಂಡು ಹೋರಾಟ ಮಾಡಲು ಸದಕಾಲ ಶ್ರಮಿಸುತ್ತಿರಬೇಕು. ಆಗ ಶೋಷಣೆ ನಿಲ್ಲುತ್ತದೆ. ಇದು ಕೇವಲ ಕಾರ್ಮಿಕರ ಐಕ್ಯತೆಯಿಂದ ಮಾತ್ರ ಸಾಧ್ಯ.

ಸಂಘಟಿತರೊಂದಿಗೆ ಅಸಂಘಟಿತ ಕಾರ್ಮಿಕರು ಸೇರಿ ಐಕ್ಯತೆಯಿಂದ ಒಕ್ಕೂಟ ರಚಿಸಿ ಆ ಮೂಲಕ ತಮ್ಮ ಬದುಕನ್ನು ಹಸನಾಗಿ ಮಾಡಿಕೊಳ್ಳಲಿ.

ದೇಶ ಕಟ್ಟುವ ಕಾಯಕದಲ್ಲಿ ಹಗಲಿರುಳು ದುಡಿಯುತ್ತಿರುವ ಕೋಟ್ಯಾಂತರ ಸಂಖ್ಯೆಯ ಕಾರ್ಮಿಕ ಸಮುದಾಯಕ್ಕೆ ಯಾವುದೆ ಜಾತಿ, ಧರ್ಮ, ಭಾಷೆ, ಬಣ್ಣ, ಪ್ರಾಂತ್ಯಗಳ ಭೇದವಿಲ್ಲ. ಕಾಯಕದಲ್ಲಿಯೇ ಕೈಲಾಸ ಕಾಣವ ಕಾರ್ಮಿಕ ವರ್ಗಕೆ ದುಡಿಮೆಯ ಜಾತಿ, ದುಡಿಮೆಯೆ ದೇವರು ದುಡಿಮೆ ಧರ್ಮ ಹಾಗೂ ದುಡಿಮೆಯೆ ಸರ್ವಸ್ವವೂ ಆಗಿದ್ದು, ಈ ಸಮುದಾಯಕ್ಕೆ ದುಡಿಯಲು ಉತ್ತಮ ಸೌಲಭ್ಯ ಕಲ್ಪಿಸಿಕೊಡುವುದರ ಜೊತೆಗೆ ವೈಜ್ಞಾನಿಕ ರೀತಿಯಲ್ಲಿ ವೇತನ ನಿಗದಿ ಪಡಿಸುವುದರ ಜೊತೆಗೆ ಕುಟುಂಬಕ್ಕೆ ಸಾಮಾಜಿಕ ಭದ್ರತೆ ಕಲ್ಪಿಸುವುದು ನಾಗರಿಕ ಸರ್ಕಾರಗಳ ಜವಾಬ್ದಾರಿಯಾಗಿದೆ.

# ಸಾಮಾಜಿಕ ಕ್ರಾಂತಿಯ ಹರಿಕಾರ, ವಿಶ್ವಮಾನವ ಶ್ರೀ ಬಸವೇಶ್ವರರು

▸▸ ಸವಿತಾ ನಾಯಕ್, ಬೆಂಗಳೂರು.



ಮನುಷ್ಯ ಆಧುನಿಕತೆಯನ್ನು ಮೈಗೂಡಿಸಿಕೊಂಡು, ವಿಶ್ವವೇ ಒಂದು ಹಳ್ಳಿಯಾಗಿ ಅಭಿವೃದ್ಧಿ ಹೊಂದಿರುವ ಈ ಕಾಲಘಟ್ಟದಲ್ಲಿ ಧರ್ಮ, ಜಾತಿ, ಭಾಷೆ, ಬಣ್ಣಗಳ ಹೆಸರಿನಲ್ಲಿ ಯಾವುದನ್ನು ತಿನ್ನಬೇಕು, ಯಾವ ಬಟ್ಟೆ ಧರಿಸಬೇಕು, ಯಾರನ್ನು ಮದುವೆಯಾಗಬೇಕು, ಯಾರೊಂದಿಗೆ ವ್ಯಾಪಾರ ಮಾಡಬೇಕು, ವಾಹನ ಚಾಲಕರು ಯಾರಾಗಿರಬೇಕು ಎಂದು ದಿನ ನಿತ್ಯ ವ್ಯಕ್ತಿಯ ವೈಯಕ್ತಿಕ ಜೀವನದಲ್ಲಿ ಕೈಯಾಡಿಸಿ ಸಮಾಜದ ಶಾಂತಿ ಕದಡುವ ಬೆಳವಣಿಗೆಗಳು ನಡೆಯುತ್ತಿರುವ ಈ ದಿನಗಳಲ್ಲಿ ಜಾತಿ ವರ್ಗರಹಿತ ವಿಶ್ವಮಾನವ ಸಂದೇಶ ಸಾರಿದ ಬಸವಣ್ಣನವರು ನೀಡಿದ ಸಮಾನತೆಯ ತತ್ವಗಳು. ಇಂದು ನಾವು ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ.

ಬಸವಣ್ಣನವರು ಜಾತಿ ಜಾತಿಗಳ, ಧರ್ಮ-ಧರ್ಮಗಳ ಹೆಸರಿನಲ್ಲಿ ನಡೆಯುತ್ತಿದ್ದ ಮಾನವ ಸಂಘರ್ಷವನ್ನು ಕುರಿತು ನೊಂದು ನುಡಿದ ಈ ವಚನ ಇಡೀ ವಿಶ್ವಕ್ಕೆ ನೀಡಿದ ಒಂದು ದಿವ್ಯ ಸಂದೇಶವಾಗಿದೆ. "ಇವನಾರವ, ಇವನಾರವ, ಇವನಾರವ ನೆಂದೆನಿಸದಿರಯ್ಯಾ ಇವ ನಮ್ಮವ, ಇವ ನಮ್ಮವ, ಇವ ನಮ್ಮವ ನೆಂದೆನಿಸಯ್ಯಾ ಕೂಡಲ ಸಂಗಮ ದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ" ಮನುಷ್ಯನಾಗಿ ಹುಟ್ಟಿದ ಮೇಲೆ ಎಲ್ಲರೂ ಸರಿ ಸಮಾನರೇ ಎಲ್ಲರೂ ನಮ್ಮವರೆ "ಇವನು ಯಾರು ಇವನು ಯಾರು" ಎಂದು ಕೇಳುವುದು ಸರಿಯಲ್ಲ. ಇವನು ನಮ್ಮವನು ಇವನು ನಮ್ಮವನು ಎಂದು ಪ್ರೀತಿಯಿಂದ ಅಪ್ಪಿಕೊಳ್ಳಬೇಕೆಂಬ ಮಾನವ ಭ್ರಾತೃತ್ವದ ದಿವ್ಯ ಸಂದೇಶ ನೀಡಿದ ಬಸವಣ್ಣನವರು.

ಮಾದಾರ ಚನ್ನಯ್ಯನನ್ನು ತನ್ನ ಅಪ್ಪನೆಂದು, ಡೋಹರ ಕಕ್ಕಯ್ಯನನ್ನು ತನ್ನ ದೊಡ್ಡಪ್ಪನೆಂದು, ಕಿನ್ನರ ಬೊಮ್ಮಯ್ಯನನ್ನು ತನ್ನ ಅಣ್ಣನೆಂದು ಸಂಬೋಧಿಸುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಹಾಗೂ ಸ್ವಾಭಿಮಾನದ ಶಕ್ತಿಯನ್ನು ತುಂಬಿದ ಹಿರಿಮೆ ಅಣ್ಣ ಬಸವಣ್ಣನವರಿಗೆ ಸಲ್ಲುತ್ತದೆ. ದಲಿತರ ಬಗ್ಗೆ ಅವರಿಗಿದ್ದ ಸಹಜ ಪ್ರೀತಿ ಹಾಗೂ ಗೌರವಕ್ಕೆ ಅವರ ಈ ಅಭಿಮಾನದ ಮಾತುಗಳು ಸಾಕ್ಷಿಯಾಗಿವೆ.

ಹನ್ನೆರಡನೆಯ ಶತಮಾನ ವಿಶ್ವದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುದು. ಕರ್ನಾಟಕದಲ್ಲಿ ಬಸವಾದಿ ಶರಣರ ದಿವ್ಯ ಮಾರ್ಗದರ್ಶನದಲ್ಲಿ ಮಾನವ ಕಲ್ಯಾಣ ದಿಸೆಯಲ್ಲಿ ನಡೆದ ಸಮರ, ಕ್ರಾಂತಿ ವಿಶ್ವದ ಯಾವುದೇ ಭಾಗದಲ್ಲಿ ಒಮ್ಮೆಲೇ ನಡೆದ ನಿದರ್ಶನಗಳೇ ಇಲ್ಲ. ವಿಶ್ವದಲ್ಲಿ ಕಾಲಕಾಲಕ್ಕೆ ಅನೇಕ ರೀತಿಯ ಕ್ರಾಂತಿಗಳಾಗಿವೆ. ಆ ಯಾವ ಕ್ರಾಂತಿಯೂ ಈ ಶರಣರು ಮಾಡಿದಂತಹ ಸಮಗ್ರ ಕ್ರಾಂತಿಯನ್ನು ಹೋಲಲು ಸಾಧ್ಯವಿಲ್ಲ. ಇದಕ್ಕೆ ಮೂಲ ಕಾರಣ ಮಾನವ ಸಮುದಾಯದ ಎಲ್ಲಾ ಕ್ಷೇತ್ರಗಳ ಸದಾಶಯಗಳಿಗೆ ಸ್ಪಂದಿಸುವಂತಹ ಕ್ರಾಂತಿಗೆ ನಾಂದಿ ಹಾಡಿದವರು ಬಸವಾದಿ ಶರಣರು.

ಧಾರ್ಮಿಕ, ಆರ್ಥಿಕ, ಸಾಹಿತ್ಯಿಕ, ನೈತಿಕ ಹಾಗೂ ಸಾಮಾಜಿಕ ಹೀಗೆ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅವರ ಕ್ರಾಂತಿಕಾರರ ವಿಚಾರಧಾರೆ ಅತ್ಯಂತ ಪ್ರಖರವಾಗಿ ಮಾನವೀಯ ನೆಲೆಯಲ್ಲಿ ಹರಿದುಬಂದದ್ದು ಒಂದು ವಿಸ್ಮಯವೇ ಸರಿ. ಇದಕ್ಕೆ ಮೂಲ ಪ್ರೇರಣೆಯಾದದ್ದು ಬಸವಾದಿ ಶರಣರ ದಾರ್ಶನಿಕ ಚಿಂತನೆಗಳು. ಅವರು ಪ್ರತಿಪಾದಿಸಿದ ಮಾನವೀಯ ಜೀವನ ಮೌಲ್ಯಗಳು. ವಿಶಿಷ್ಟವಾದ ವೈಚಾರಿಕ ನೆಲೆಯಲ್ಲಿ ಮಾನವ ಬದುಕನ್ನು ಕಂಡಂತಹ ಅವರ ವಿಶಿಷ್ಟವಾದ ಧೋರಣೆಗಳು, ಸಮಗ್ರ ಕ್ರಾಂತಿಯ ಮೂಲಕ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಅವರ ಉದಾತ್ತ ಜೀವನ ಸಿದ್ಧಾಂತಗಳು. ಬಸವಣ್ಣನವರ ಮಹಾನ್ ದಾರ್ಶನಿಕ ಮಾರ್ಗದರ್ಶನದಲ್ಲಿ ನಾಡಿನ, ರಾಷ್ಟ್ರದ ಮೂಲೆ ಮೂಲೆಗಳಿಂದಲೂ ಶರಣ ತತ್ವಗಳಿಂದ ಆಕರ್ಷಿತರಾಗಿ ನೂರಾರು ಶರಣರು ಏಕಕಾಲಕ್ಕೆ ಬಂದದ್ದು ಒಂದು ಐತಿಹಾಸಿಕ ಘಟನೆ. ಶರಣರ ಆಗಮನದಿಂದ ಕಲ್ಯಾಣದಲ್ಲಿ ನಡೆದಂತಹ ಒಂದು ವಿನೂತನವಾದ ಸಮರ ಕ್ರಾಂತಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಬಸವಣ್ಣನವರ ದರ್ಶನದಿಂದ ನನ್ನ ಬದುಕು ಸಾರ್ಥಕವಾಯಿತು ಎನ್ನುವ ಅಲ್ಲಮಪ್ರಭುಗಳ ಈ ವಚನವು ಬಸವಣ್ಣನವರ ದಿವ್ಯ ವ್ಯಕ್ತಿತ್ವವಕ್ಕೆ ಹಿಡಿದ ಕನ್ನಡಿಯಂತಿದೆ. "ಕಲ್ಯಾಣವೆಂಬ ಪ್ರಣತಿಯಲ್ಲಿ, ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯ ಅಸಂಖ್ಯಾತ ಭಕ್ತಗಣಂಗಳು ಶಿವಭಕ್ತರಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೆ? ಶಿವಭಕ್ತರಿದ್ದ ದೇಶ ಪಾವನವೆಂಬುದು ಹುಸಿಯೆ? ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನ ಬಸವಣ್ಣನ ಕಂಡು ಬದುಕಿದೆನು ಕಾಣಾ,

**ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಹೆಣ್ಣಿನ ಬಗ್ಗೆ ಅತ್ಯಂತ ಅಭಿಮಾನದಿಂದ ದನಿ ಎತ್ತಿದ್ದಾರೆ. ಹೆಣ್ಣಿನ ಬಗ್ಗೆ ಭಾರತೀಯ ವೈದಿಕ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದ್ದ ಕೀಳು ಭಾವನೆಯನ್ನು, ಅಸಮಾನತೆಯನ್ನು ಬಸವಣ್ಣನವರ ಈ ಚಳವಳಿ ತೊಡೆದು ಹಾಕಿದೆ. ಹೆಣ್ಣು ಮಾಯೆಯಲ್ಲ, ಆತ್ಮಕ್ಕೆ ಲಿಂಗಭೇದವಿಲ್ಲ, ಹೆಣ್ಣು ಅಸ್ಪೃಶ್ಯಳಲ್ಲ. ಹೆಣ್ಣು ಪ್ರತ್ಯಕ್ಷ ದೇವತೆ, ಪರಸ್ತ್ರೀ ಪಾರ್ವತಿಯ ಸಮಾನ ಎಂದು ಸಾರುವ ಮೂಲಕ ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಿದ ಹಿರಿಮೆ ಬಸವಣ್ಣನವರಿಗೆ ಮತ್ತು ಅವರ ಸಮಕಾಲೀನ ಶರಣರಿಗೆ ಸಲ್ಲುತ್ತದೆ. ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಗಳಿಂದಾಗಿ ಸಮಾಜದಲ್ಲಿ ಸ್ತ್ರೀಗೆ ಉಂಟಾಗಿದ್ದ ಅಸಮಾನತೆ, ಶೋಷಣೆಗಳನ್ನು ಕಂಡು ವಚನಕಾರರು ಕಿಡಿಕಾರಿ ಸಮಾನತೆಯ ಸಮಾಜವನ್ನು ನಿರ್ಮಿಸುವಲ್ಲಿ ಪ್ರಯತ್ನ ನಡೆಸಿದ್ದಾರೆ.**



ಸಿದ್ದರಾಮಯ್ಯ"

**ಅನುಭವ ಮಂಟಪ :** ಬಸವಾದಿ ಶರಣರು ತಮ್ಮ ಎಲ್ಲಾ ಶರಣ ಸಮೂಹದೊಂದಿಗೆ ಅನುಭಾವದ ಬಗ್ಗೆ ಚಿಂತನೆ, ವಿಚಾರ ವಿನಿಮಯ ಮತ್ತು ಸಂವಾದಕ್ಕಾಗಿ ನಿರ್ಮಿಸಿಕೊಂಡಿದ್ದ ಒಂದು ಚಿಂತನೆಯ ವೇದಿಕೆಯೇ ಅನುಭವ ಮಂಟಪ, ಇದೊಂದು ಜ್ಞಾನದ ಪೀಠ. ಕಾಯಕ ಭೇದವಿಲ್ಲದೆ, ಲಿಂಗಭೇದವಿಲ್ಲದೆ, ಜಾತ್ಯತೀತ ನೆಲೆಯಲ್ಲಿ ಶರಣರೆಲ್ಲರೂ ಕೂಡಿ ತಮ್ಮ ತಮ್ಮ ದಿನ ನಿತ್ಯದ ಕಾಯಕ ಮತ್ತು ಬದುಕಿನ ಅನುಭಾವದ ಸಂವೇದನೆಯ ಹಿನ್ನಲೆಯಲ್ಲಿ ನಿರ್ಭೀತವಾಗಿ ನಡೆಸುತ್ತಿದ್ದ ಶರಣರ ಆಧ್ಯಾತ್ಮಿಕ ಚಿಂತನೆಗಳ ಒಂದು ಪ್ರಜಾಸತ್ತಾತ್ಮಕ ಕೇಂದ್ರವೇ ಅನುಭವ ಮಂಟಪ. ಈ ಅನುಭವ ಮಂಟಪವೇ ವಿಶ್ವದ ಮೊದಲ ಪಾರ್ಲಿಮೆಂಟ್ ಎಂದು ವಿಮರ್ಶಕರಿಂದ ಬಣ್ಣಿಸಲಾಗಿದೆ.

**ಜೀವನ ಸಂವಿಧಾನ :** ಬಸವಣ್ಣನವರ ಕ್ರಾಂತಿಗೆ ಮೂಲ ಆಧಾರವಾದಂತಹ ಈ ವಚನ ಇಡೀ ವಿಶ್ವ ಸಮುದಾಯಕ್ಕೆ ನೀಡಿದಂತಹ ಒಂದು ಸಾಮಾಜಿಕ ನೀತಿ ಸಂಹಿತೆ. ಜಗತ್ತಿನ ಮನುಕುಲಕ್ಕೆ ನೀಡಿದಂತಹ ಜೀವನ ಸಂವಿಧಾನ, ಮಾನವ ಸಂವಿಧಾನ. "ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ ತನ್ನ ಬಣ್ಣಿಸಬೇಡ, ಇದಿರಹಳಿಯಲು ಬೇಡ ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ"

**ಸ್ತ್ರೀ ಸಮಾನತೆ :** ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಹೆಣ್ಣಿನ ಬಗ್ಗೆ ಅತ್ಯಂತ ಅಭಿಮಾನದಿಂದ ದನಿ ಎತ್ತಿದ್ದಾರೆ. ಹೆಣ್ಣಿನ ಬಗ್ಗೆ ಭಾರತೀಯ ವೈದಿಕ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದ್ದ ಕೀಳು ಭಾವನೆಯನ್ನು, ಅಸಮಾನತೆಯನ್ನು ಬಸವಣ್ಣನವರ ಈ ಚಳವಳಿ ತೊಡೆದು ಹಾಕಿದೆ. ಹೆಣ್ಣು ಮಾಯೆಯಲ್ಲ, ಆತ್ಮಕ್ಕೆ ಲಿಂಗಭೇದವಿಲ್ಲ, ಹೆಣ್ಣು ಅಸ್ಪೃಶ್ಯಳಲ್ಲ. ಹೆಣ್ಣು ಪ್ರತ್ಯಕ್ಷ ದೇವತೆ, ಪರಸ್ತ್ರೀ ಪಾರ್ವತಿಯ ಸಮಾನ ಎಂದು ಸಾರುವ ಮೂಲಕ ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಿದ ಹಿರಿಮೆ ಬಸವಣ್ಣನವರಿಗೆ ಮತ್ತು ಅವರ ಸಮಕಾಲೀನ ಶರಣರಿಗೆ ಸಲ್ಲುತ್ತದೆ. ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಗಳಿಂದಾಗಿ ಸಮಾಜದಲ್ಲಿ ಸ್ತ್ರೀಗೆ ಉಂಟಾಗಿದ್ದ ಅಸಮಾನತೆ, ಶೋಷಣೆಗಳನ್ನು ಕಂಡು ವಚನಕಾರರು ಕಿಡಿಕಾರಿ ಸಮಾನತೆಯ ಸಮಾಜವನ್ನು ನಿರ್ಮಿಸುವಲ್ಲಿ ಪ್ರಯತ್ನ ನಡೆಸಿದ್ದಾರೆ.

**ಕಾಯಕ ತತ್ವ :** ಬಸವಣ್ಣನವರು ಪ್ರತಿಪಾದಿಸಿದ ಬಹು ದೊಡ್ಡ ಆರ್ಥಿಕ ಸೂತ್ರವೆಂದರೆ ಕಾಯಕತತ್ವ. ಬಸವಣ್ಣನವರ ದೃಷ್ಟಿಯಲ್ಲಿ ಪ್ರತಿಯೊಬ್ಬ ಶರಣನಿಗೂ ಕಾಯಕ ಅನಿವಾರ್ಯ. ಕಾಯಕವಿಲ್ಲದೆ ಗುರು ಲಿಂಗ ಜಂಗಮರಿಗೂ ಮುಕ್ತಿಯಿಲ್ಲ ಎಂಬ ಹಾಗೂ "ಕಾಯಕವೇ ಕೈಲಾಸ" ಎಂಬ ಸಿದ್ಧಾಂತದ ಪ್ರತಿಪಾದನೆಗೆ ಬಸವಣ್ಣನವರೇ ನಿಜವಾದ ಸ್ಫೂರ್ತಿಯಾಗಿದ್ದರು. ಕಾಯಕವು ಎಷ್ಟು ಮುಖ್ಯವೋ ಶರಣರು ಕೈಗೊಳ್ಳುವ ಕಾಯಕಕ್ಕೆ ಅವರು ಅಷ್ಟೇ ಗೌರವ ನೀಡಬೇಕು. ಕಾಯಕದಲ್ಲಿ ಮೇಲು ಕೀಳು ಎಂಬ ಭಾವ ಸಲ್ಲದು. ಶರಣರು ಮಾಡುವ ಕಾಯಕವು ಸತ್ಯ ಶುದ್ಧವಾಗಿರಬೇಕು, ಸಮಾಜಮುಖಿಯಾಗಿರಬೇಕು ಎಂಬುದು ಬಸವಣ್ಣನವರ ಅಚಲವಾದ ನಂಬಿಕೆ.

**ದಾಸೋಹ ಸಿದ್ಧಾಂತ :** ಬಸವಣ್ಣನವರ ದೃಷ್ಟಿಯಲ್ಲಿ ದಾಸೋಹ, ಪ್ರೀತಿ, ಪರಸ್ಪರ ಗೌರವದಿಂದ ದಾಸೋಹದ ಫಲಪಡೆಯುವವರ ಆತ್ಮಾಭಿಮಾನಕ್ಕೆ ಧಕ್ಕೆ ಆಗದ ಹಾಗೆ ನೀಡುವವರ ಹಾಗೂ ಪಡೆಯುವವರ ನಡುವೆ ಸಮಾನತೆಯ ಸ್ವಾಭಿಮಾನದಿಂದ ನಡೆಯಬೇಕಾದ ಒಂದು ಸಾಮಾಜಿಕ ಕರ್ತವ್ಯ. ಅವರ ದಾಸೋಹ ಸಿದ್ಧಾಂತದಲ್ಲಿ ಧಾರ್ಮಿಕ ಭಾವ ಹಾಗೂ ಆರ್ಥಿಕ ಚಿಂತನೆ ಎರಡೂ ಅಡಗಿವೆ. ತಾನು ಕಾಯಕದಿಂದ ಗಳಿಸಿದ ಧನವು ಲೋಕ ಕಲ್ಯಾಣದ ದಾಸೋಹ ಕಾರ್ಯದಲ್ಲಿ




ಸಂಪೂರ್ಣವಾಗಿ ಸವೆಯಬೇಕೆಂಬುದು ಅವರ ಸದಾಶಯ."ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು? ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ? ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಯಿಂದ ಕರಕಷ್ಟಕೂಡಲಸಂಗಮದೇವಾ."ಹಂಚಿಕೊಂಡು ತಿನ್ನುವ ದಾಸೋಹ ಭಾವ ಪ್ರಾಣಿ ಪಕ್ಷಿಗಳಲ್ಲಿ ಇರುವುದನ್ನು ಬಸವಣ್ಣನವರು ಗುರುತಿಸುತ್ತಾರೆ.

**ಆಡಳಿತದಲ್ಲಿ ಸಂವೇದನೆ :** "ಏನಿ ಬಂದಿರಿ, ಹದುಳಿದ್ದಿರೆ ಎಂದಡೆ ನಿಮ್ಮೈಸಿರಿ ಹಾರಿ ಹೋಹುದೆ? ಕುಳ್ಳಿರೆಂದಡೆ ನೆಲ ಕುಳಿಹೋಹುದೆ? ಒಡನೆ ನುಡಿದಡೆ ಸಿರ, ಪಟ್ಟೆಯೊಡೆವುದೆ? ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆಮೂಗ ಕೊಯ್ವುದ ಮಾಬನೆ ಕೂಡಲಸಂಗಮದೇವಯ್ಯ?" ಬಸವಣ್ಣನವರ ಈ ವಚನವು ಸಾರ್ವಜನಿಕ ಆಡಳಿತದಲ್ಲಿ ಆಡಳಿತ ನಡೆಸುವವರು ಹೇಗೆ ಜನ ಸಮುದಾಯದ ಜೊತೆಗೆ ಸ್ಪಂದಿಸಬೇಕು ಎಂಬುದನ್ನು ತುಂಬಾ ಸುಂದರವಾಗಿ ನಿರೂಪಿಸುತ್ತದೆ.

**ಇಂದಿನ ಸಮಾಜದ ನೈಜ ಚಿತ್ರಣ :** "ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದಡೆ ನಿಲಲುಬಾರದು. ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳುವಡೆ, ತಾಯ ಮೊಲೆ ಹಾಲುನಂಜಾಗಿ ಕೊಲುವಡೆ ಇನ್ನಾರಿಗೆ ದೂರುವೆ ಕೂಡಲ ಸಂಗಮ ದೇವ." ಸ್ವಜನಪಕ್ಷಪಾತ, ಭ್ರಷ್ಟಾಚಾರ, ಹಿಂಸಾಚಾರ, ಭಯೋತ್ಪಾದನೆ ಮುಂತಾದ ಸಾಮಾಜಿಕ ಅನಿಷ್ಟಗಳಿಂದ ಕುಸಿಯುತ್ತಿರುವ ಮಾನವೀಯ ಮೌಲ್ಯಗಳ ಬಗ್ಗೆ ಬಸವಣ್ಣನವರು ತಮ್ಮ ನೋವನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾರೆ. ಒಲೆ ಹತ್ತಿ ಉರಿದಾಗ ಅದನ್ನು ನಿಯಂತ್ರಿಸಬಹುದು ಆದರೆ ಭೂಮಿಯೇ ಹೊತ್ತಿಕೊಂದು ಉರಿಯಲು ಪ್ರಾರಂಭಿಸಿದಲ್ಲಿ ಜನರ ಗತಿ ಏನಾಗಬಹುದು? ಭೂಮಿಗೆ ನೀರುಣಿಸಬೇಕೆಂಬ ಗುರಿಯನ್ನು ಹೊಂದಿರುವ ಏರಿಯೇ ನೀರನ್ನು ಕುಡಿಯಲು ಆರಂಭಿಸಿದರೆ, ರೈತರ ಬೆಳೆಯನ್ನು ರಕ್ಷಿಸಬೇಕಾದ ಬೇಲಿಯೇ ಬೆಳೆಯನ್ನು ಭಕ್ಷಿಸಲು ಆರಂಭಿಸಿದರೆ, ಮನೆಯ ಒಡತಿಯೇ ತನ್ನ ಮನೆಯಲ್ಲಿ ಕಳ್ಳತನ ಮಾಡಿದರೆ, ತನ್ನ ಮಕ್ಕಳನ್ನು ತನ್ನ ಸ್ತನ್ಯಪಾನದಿಂದ ಸಲಹಬೇಕಾದ ಹೆತ್ತ ತಾಯಿಯ ಅಮೃತ ಸಮಾನವಾದ ಮೊಲೆ ಹಾಲೇ ವಿಷವಾದರೆ ಯಾರಿಗೆ ದೂರುವುದು? ಎಂದು ಭಗವಂತನಲ್ಲಿ ಪ್ರಶ್ನಿಸುತ್ತಾರೆ ಭಕ್ತಿ ಭಂಡಾರಿ ಬಸವಣ್ಣನವರು. ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಇಂದು ಸಂಭವಿಸಿರುವ ಸಾಮಾಜಿಕ ಮೌಲ್ಯಗಳ ಅಧಃಪತನದ ಪ್ರಕ್ಷುಬ್ಧ ಸಮಾಜದ ನೈಜ ಚಿತ್ರಣಕ್ಕೆ ಹಿಡಿದ ಕನ್ನಡಿಯಂತಿದೆ ಈ ವಚನ. ವಿಶ್ವದ ಎಲ್ಲಾ ದಾರ್ಶನಿಕರ ಶ್ರೇಷ್ಠವಾದ ಚಿಂತನೆಗಳನ್ನು ವಚನ ಸಾಹಿತ್ಯ ಎಂಬ ಶ್ರೇಷ್ಠವಾದ ಅನುಭಾವ ಸಾಹಿತ್ಯದ ಮೂಲಕ ಜಗತ್ತಿಗೆ ನೀಡಿದ ಹಿರಿಮೆ ಬಸವಾದಿ ಶರಣರಿಗೆ ಸಲ್ಲುತ್ತದೆ. ಜಾತ್ಯಾತೀತ ಸಮಾಜದ ಕಲ್ಪನೆ, ಸ್ತ್ರೀ ಸಮಾನತೆಯ ಪ್ರತಿಪಾದನೆ, ಕಾಯಕ ದಾಸೋಹ, ಸಿದ್ಧಾಂತಗಳ ಅನುಷ್ಠಾನ, ನಿಸರ್ಗದ ಬಗೆಗಿನ ಪ್ರೀತಿ, ವೈಚಾರಿಕ ಚಿಂತನೆಗಳಿಗೆ ಪ್ರೋತ್ಸಾಹ, ಜನರ ಢಾಂಬಿಕ ಬದುಕಿನ ಬಗ್ಗೆ ಎಚ್ಚರಿಗೆ, ಭಕ್ತಿಯೇ ಪ್ರಧಾನ ಎಂಬ ತತ್ವದ ಪ್ರತಿಪಾದನೆ ಎಲ್ಲರೂ ನನ್ನವರೆನ್ನುವ ವಿಶ್ವ ಭ್ರಾತೃತ್ವಭಾವ, ಎನಗಿಂತ ಕಿರಿಯರಿಲ್ಲ ಎಂಬ ವಿನಮ್ರ ಭಾವದಿಂದ ಜಗತ್ತನ್ನು ಬೆಳಗಿದ ಜಗದ ಜ್ಯೋತಿ, ಭಕ್ತಿ ಭಂಡಾರಿ ಶ್ರೇಷ್ಠ ಮಾನವತಾವಾದಿ, ಮಹಾನ್ ದಾರ್ಶನಿಕರು ಬಸವಣ್ಣನವರು. ಎಲ್ಲಕ್ಕಿಂತ ಮಿಗಿಲಾಗಿ ಶೋಷಣೆ ರಹಿತ ಸಮಾನತೆಯ ಸಮಾಜದ ಸೃಷ್ಟಿಗಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡ ಸಾಮಾಜಿಕ ಹರಿಕಾರ ಸುಧಾರಕ ಬಸವಣ್ಣನವರು. ಅವರು ಪ್ರತಿಪಾದಿಸಿದ ಜೀವನ ಮೌಲ್ಯಗಳು ಎಂದೆಂದಿಗೂ ಪ್ರಸ್ತುತ.

12ನೆಯ ಶತಮಾನದಲ್ಲಿ ಬಸವಣ್ಣನವರ ಕಾಲಘಟ್ಟದಲ್ಲಿ ಯಾವೆಲ್ಲ ಅನಿಷ್ಟ ಪದ್ದತಿಗಳು ಮಾನವ ಸಮಾಜವನ್ನು ಕಾಡುತ್ತಿದ್ದವು ಆ ಅನಿಷ್ಟಗಳೆಲ್ಲವೂ ಇಂದು ಹೊಸ ರೂಪ ತಳೆದು ಆಧುನಿ ಮಾನವ ಸಮಾಜಕ್ಕೆ ಒಕ್ಕರಿಸಿದ್ದು ಮನುಷ್ಯ ಮನುಷ್ಯರ ನಡುವಿನ ಶಾಂತಿ ಸಹಬಾಳ್ವೆ, ಸಹೋದರತ್ವ ಕೊಂಡಿಯನ್ನೆ ತುಂಡರಿಸುವ ಕಾರ್ಯದಲ್ಲಿ ನಿರತವಾಗಿವೆ. ಈ ಕಾಲದಲ್ಲಿ ನಮ್ಮೊಳಗೆ ವರ್ಗ ಭೇದ ರಹಿತ ಸಮ ಸಮಾಜ ನಿರ್ಮಾಣಕ್ಕೆ ಇನ್ನೊಬ್ಬ ಬಸವಣ್ಣ ಹುಟ್ಟಿಬರಲಿ ಇಲ್ಲವೆ ನಾವೆಲ್ಲರೂ ಬಸವಣ್ಣರಾಗುವತ್ತ ದೃಢ ಸಂಕಲ್ಪ ತಳೆಯೋಣ ಆ ಮೂಲಕ ಸುಂದರ ಸಮಾಜ ಕಟ್ಟೋಣ.



# ಸಹಕಾರ ಕ್ಷೇತ್ರದಲ್ಲಿ ಯುವಜನರ ಪಾತ್ರ

▸▸ ಲಕ್ಷ್ಮೀಪತಯ್ಯ, ಕೆ.ಸಿ.ಎಸ್., ಜಂಟಿ ನಿಬಂಧಕರು ಹಾಗೂ ಕಾರ್ಯದರ್ಶಿ, ಕ.ರಾ.ಸ. ಮಹಾಮಂಡಳ ನಿ., ಬೆಂಗಳೂರು.

**ಯುವಜನರನ್ನು ಬಹುವಾಗಿ ಕಾಡುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ಸಹಕಾರಿ ತತ್ವದ ಮೂಲಕ ಪರಿಹರಿಸುವ ಪ್ರಯತ್ನಗಳು ವ್ಯಾಪಕವಾಗಿ ಆಗಬೇಕು, ಆಗುತ್ತಿವೆ. 75 ಮಿಲಿಯನ್ ಯುವಜನರು ನಿರುದ್ಯೋಗಿಗಳು ಆಗಿದ್ದಾರೆ ಎಂಬುದು ಆತಂಕಕಾರಿ ವಿಷಯ. ವಿಶ್ವದಾದ್ಯಾಂತ ಈ ಪ್ರಕ್ರಿಯೆ ವ್ಯಾಪಕವಾಗಿದೆ ಇದರಿಂದ ಸಮಾಜದಲ್ಲಿ ಅಶಾಂತಿ, ಸಮಾಜಿಕ ಗೊಂದಲ, ಗುಂಪುದಾಂದಲೆ ಮೊದಲಾದವುಕ್ಕೆ ಅವಕಾಶವಾಗುತ್ತದೆ. ಯುವಜನರ ಶಕ್ತಿಯನ್ನು ಸರಿಯಾಗಿ ಬಳಕೆ ಮಾಡಿಕೊಂಡರೆ ಬಡತನ ನಿವಾರಣೆ, ಉದ್ಯೋಗ ಸೃಷ್ಟಿ ಮೊದಲಾದವುಕ್ಕೆ ದಾರಿಯಾಗುತ್ತದೆ. ಸಮಾಜ ಕಾರ್ಯದಲ್ಲಿ ಯುವಜನರಿಗೆ ಆಸಕ್ತಿ ಇಲ್ಲದಿರುವುದನ್ನು ಮೆಟ್ಟಿ ನಿಂತು ಅವರಲ್ಲಿ ಉತ್ಸಾಹವನ್ನು ತುಂಬಾಬೇಕಾದ ಕೆಲಸ ಆಗಬೇಕು.**

ರಾಷ್ಟ್ರ ನಿರ್ಮಾಣದ ಕಲ್ಪನೆ ಕಣ್ಣ ಮುಂದೆ ಬಂದಾಗ ಯುವಜನರು ಮುನ್ನಲೆಗೆ ಬರುತ್ತಾರೆ. ಸಮಾಜದ ಬೆಳವಣಿಗೆ ರಾಷ್ಟ್ರದ ಅಭಿವೃದ್ಧಿ ಯುವಜನರಿಂದ ಪರಿಣಾಮಕಾರಿಯಾಗಿ ಆಗಬಲ್ಲದು ಎಂಬ ಅಭಿಪ್ರಾಯ ಜನಜನಿತವಾಗಿದೆ. ಈ ಸಂದರ್ಭದಲ್ಲಿ ಯುವಜನರ ಬಗ್ಗೆ ರಾಷ್ಟ್ರ ನಿರ್ಮಾಪಕರು ಹೇಳಿರುವ ಮಾತುಗಳು ಪ್ರಸ್ತುತವಾಗಿವೆ.

"ರಾಷ್ಟ್ರ ನಿರ್ಮಾಣದಲ್ಲಿ ಯುವಜನಾಂಗ ಪರಿಣಾಮಕಾರಿ ಪಾತ್ರವನ್ನು ನಿರ್ವಹಿಸ ಬಲ್ಲರೆಂಬುದು ಸ್ವಾತಂತ್ರ್ಯ ಹೋರಾಟದಲ್ಲಿ ಸ್ಪಷ್ಟವಾಯಿತು" ಎಂದವರು ಪೂಜ್ಯ ಗಾಂಧೀಜಿ.

"ಯುವಜನರಿಂದ ಸಮಾಜದ ಅಬಲವರ್ಗ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ" ಎಂದವರು ಡಾ॥ ಬಿ.ಆರ್. ಅಂಬೇಡ್ಕರ್. "ವಿಶ್ವಖ್ಯಾತಿಗಳಿಸಿರುವ ಭಾರತದ ಅಣುಸಂಶೋಧನೆ ಮತ್ತು ಕ್ಷಿಪಣಿ ಉಡಾವಣೆಯಲ್ಲಿ ಭಾರತದ ಯುವಜನರು ಮಹತ್ವದ ಪಾತ್ರವನ್ನು ವಹಿಸಿ ಪ್ರೇರೆಪಿಸಿದ್ದಾರೆ" ಎಂದವರು ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ. ಮೇಲಿನ ರಾಷ್ಟ್ರ ನಿರ್ಮಾಪಕರ ಮಾತುಗಳು ಇಂದಿಗೂ ಪ್ರಸ್ತುತ ಎನಿಸುತ್ತದೆ. ರಾಷ್ಟ್ರ ನಿರ್ಮಾಣದ ಪ್ರಯತ್ನದಲ್ಲಿ ಯುವಜನರನ್ನು ತೊಡಗಿಸಿಕೊಳ್ಳಬೇಕಾದುದು ಅಗತ್ಯ ಹಾಗೂ ಅನಿವಾರ್ಯ. ರಾಷ್ಟ್ರ ನಿರ್ಮಾಣಕ್ಕೆ ಪರಿಣಾಮಕಾರಿಯಾಗಿ ಕೈಜೋಡಿಸುತ್ತಿರುವ ಸಹಕಾರ ಚಳವಳಿ ಬಲಗೊಳ್ಳಬೇಕಾದ ಅಗತ್ಯವನ್ನು ಅರ್ಥಶಾಸ್ತ್ರಜ್ಞರು ಪ್ರತಿಪಾದಿಸುತ್ತಾ ಬಂದಿದ್ದಾರೆ.

ಸಹಕಾರ ಚಳವಳಿ ಬಲಗೊಳ್ಳಲು ಯುವಜನಾಂಗ ಅಪಾರ ಕೊಡುಗೆ ನೀಡಬಲ್ಲರೆಂಬ ವಿಶ್ವಾಸ ದಿನದಿಂದ ದಿನಕ್ಕೆ ವೃದ್ಧಿಗೊಳ್ಳುತ್ತಿದೆ ಆದುದರಿಂದ ಯುಜನಾಂಗವನ್ನು ಸಹಕಾರ ಕ್ಷೇತ್ರದತ್ತ ಸೆಳೆಯುವುದು ಅನಿವಾರ್ಯ ಎನಿಸುತ್ತಿದೆ.

ಯುವಜನರಲ್ಲಿ ಪ್ರಮುಖವಾಗಿ ಎರಡು ಗುಣಗಳನ್ನು ಕಾಣಬಹುದು. ನಿಷ್ಕಲ್ಮಶ ಮನೋಭಾವ ಹಾಗೂ ಪೂರ್ವಗ್ರಹ ಪೀಡಿತರಾಗಿಲ್ಲದಿರುವುದು ಇವುಗಳ ಜೊತೆಗೆ ಹೊಸತನ, ಕ್ರೀಯಾಶೀಲ ನಾಯಕತ್ವ ಗುಣ, ಸಾಮಾಜಿಕ ಬದ್ಧತೆ, ಅಬಲರ ಬಗ್ಗೆ ಅನುಕಂಪ ಮೊದಲಾದ ಸದ್ಗುಣಗಳನ್ನು ಕಾಣಬಹುದು. ಯುವಜನರ ಈ ಎಲ್ಲಾ ಗುಣಗಳನ್ನು ಕ್ರೂಡೀಕರಿಸಿದಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆ ಸಾಧ್ಯವಾಗುವುದೆಂಬ ವಿಶ್ವಾಸವನ್ನು ಇರಿಸಿಕೊಳ್ಳಬಹುದಾಗಿದೆ.



ಪ್ರಾರಂಭಕ್ಕೆ ಸಹಕಾರ ಕ್ಷೇತ್ರದ ಬಗ್ಗೆ ಸಹಕಾರ ಸಂಘಗಳ ಬಗ್ಗೆ ಯುವಜನರಲ್ಲಿ ಇರಬಹುದಾದ ಋಣಾತ್ಮಕ ಅಂಶಗಳನ್ನು ಹೋಗಲಾಡಿಸಿ ಧನಾತ್ಮಕ ಚಿಂತನೆಯತ್ತ ಅವರನ್ನು ಸೆಳೆಯಬೇಕಾಗಿದೆ. ಸಹಕಾರ ಕ್ಷೇತ್ರ ಸೇವಾ ಕ್ಷೇತ್ರ. ದೇಶ ಕಟ್ಟಲು ಸಮರ್ಥ ಕ್ಷೇತ್ರ, ಯುವಜನರಿಗೆ ಉದ್ಯೋಗ, ಆರ್ಥಿಕ ಚೈತನ್ಯ, ಉತ್ಸಾಹಗಳನ್ನು ತುಂಬಬಹುದಾದ ಕ್ಷೇತ್ರ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಸಹಕಾರ ಕ್ಷೇತ್ರ ನಮ್ಮ ರಾಷ್ಟ್ರದಲ್ಲಿ ಬೃಹತ್ ಆಗಿ ಮಹತ್ತಾಗಿ ಬೆಳೆದಿದೆ ಎಂಬುದನ್ನು ಮನದಟ್ಟುಮಾಡಿಕೊಡಬೇಕಾಗಿದೆ. ನಮ್ಮ ರಾಷ್ಟ್ರದಲ್ಲಿ 8 ಲಕ್ಷಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳು 30 ಕೋಟಿ ಸದಸ್ಯ ಬಳಗ ತನ್ನ ಉಜ್ವಲ ಭವಿಷ್ಯಕ್ಕೆ ಯುವಜನರತ್ತ ನೋಡುತ್ತಿದೆ. ಇದರ ಹಿನ್ನಲೆಯಲ್ಲಿ ಗ್ರಾಮೀಣ ಜನರಲ್ಲಿ ಸಹಕಾರ ತತ್ವದ ಬಗ್ಗೆ ಉತ್ಸುಕತೆಯನ್ನು ತರಲು ಯುವಜನರನ್ನು ಸಿದ್ಧಪಡಿಸಬಹುದಾಗಿದೆ.

**ನಿರುದ್ಯೋಗ ಸಮಸ್ಯೆ :** ಯುವಜನರನ್ನು ಬಹುವಾಗಿ ಕಾಡುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ಸಹಕಾರಿ ತತ್ವದ ಮೂಲಕ ಪರಿಹರಿಸುವ ಪ್ರಯತ್ನಗಳು ವ್ಯಾಪಕವಾಗಿ ಆಗಬೇಕು, ಆಗುತ್ತಿವೆ. 75 ಮಿಲಿಯನ್ ಯುವಜನರು ನಿರುದ್ಯೋಗಿಗಳು ಆಗಿದ್ದಾರೆ ಎಂಬುದು ಆತಂಕಕಾರಿ, ವಿಶ್ವದಾದ್ಯಾಂತ ಈ ಪ್ರಕ್ರಿಯೆ ವ್ಯಾಪಕವಾಗಿದೆ ಇದರಿಂದ ಸಮಾಜದಲ್ಲಿ ಅಶಾಂತಿ, ಸಮಾಜಿಕ ಗೊಂದಲ, ಗುಂಪುದಾಂದಲೆ ಮೊದಲಾದವುಕ್ಕೆ ಅವಕಾಶವಾಗುತ್ತದೆ. ಯುವಜನರ ಶಕ್ತಿಯನ್ನು ಸರಿಯಾಗಿ ಬಳಕೆ ಮಾಡಿಕೊಂಡರೆ ಬಡತನ ನಿವಾರಣೆ, ಉದ್ಯೋಗ ಸೃಷ್ಟಿ ಮೊದಲಾದವುಕ್ಕೆ



ದಾರಿಯಾಗುತ್ತದೆ. ಸಮಾಜ ಕಾರ್ಯದಲ್ಲಿ ಯುವಜನರಿಗೆ ಆಸಕ್ತಿ ಇಲ್ಲದಿರುವುದನ್ನು ಮೆಟ್ಟಿ ನಿಂತು ಅವರಲ್ಲಿ ಉತ್ಸಾಹವನ್ನು ತುಂಬಾಬೇಕಾದ ಕೆಲಸ ಆಗಬೇಕು. ಶಿಕ್ಷಣ ಮತ್ತು ಉದ್ಯೋಗ ಪರಸ್ಪರ ಪೂರಕ ಮತ್ತು ಪೋಷಕ ಆಗಬೇಕು. ಈ ಪ್ರಕ್ರಿಯೆಗೆ ಸಹಕಾರ ವಲಯವನ್ನು ಹೊರತು ಪಡಿಸಿದರೆ ಅನ್ಯವಲಯ ಕಂಡುಬರುತ್ತಿಲ್ಲ. ಸಹಕಾರ ಎಂದರೆ ಒಂದು ಮಹತ್ತರ ಅವಕಾಶ ಎಂದು ಭಾವಿಸಬೇಕು. ಯುವಜನ ಎಂದರೆ ಪುರುಷರು ಮತ್ತು ಮಹಿಳೆಯರು ಎಂದೆ ತಿಳಿಯಬೇಕು. ಸಹಕಾರ ತತ್ವದಲ್ಲಿ ಸ್ವಸಹಾಯ, ಸ್ವಜವಾಬ್ದಾರಿ, ಪ್ರಜಾಪ್ರಭುತ್ವ, ಸಮಾನತೆ ಮತ್ತು ರಾಷ್ಟ್ರೀಯತೆ ಇರುವುದನ್ನು ಯುವಜನರು ಅರಿಯಬೇಕು.

**ಉದ್ಯೋಗ ಸೃಷ್ಟಿ :** ಪ್ರಪಂಚದಾದ್ಯಂತ ಈಗಾಗಲೇ ಸಹಕಾರಿ ಚಳವಳಿ 100 ಮಿಲಿಯನ್ ಉದ್ಯೋಗಳು ಸೃಷ್ಟಿಸಿರುವ ಅಂದಾಜು ಇದೆ. ಮತ್ತಷ್ಟು ಉದ್ಯೋಗಗಳನ್ನು ಸೃಷ್ಟಿಸಲು ಸಮರ್ಥವಿದೆ. ಸಹಕಾರ ಚಳವಳಿಯಲ್ಲಿ ಸಣ್ಣಸಣ್ಣ ಬಂಡವಾಳದೊಂದಿಗೆ ಬೃಹತ್ ಉದ್ಯಮಗಳ ಸ್ಥಾಪನೆ ಸಾಧ್ಯವೆಂಬುದು ಕಣ್ಣ ಮುಂದೆ ಇದೆ.


ಇಂತಹ ಆಶದಾಯಕ ಭವಿಷ್ಯದ ಚಿಂತನೆಯಲ್ಲಿ ಯುವಜನರಿಗೆ ಸಹಕಾರ ಕುರಿತ ಪರಿಣಾಮಕಾರಿ ಶಿಕ್ಷಣ, ತರಬೇತಿ ನೀಡಬೇಕಾದ ಅಗತ್ಯ ಹಿಂದೆಂದಿಗಿಂತಲೂ ಇಂದು ಹೆಚ್ಚಿದೆ. ಈ ದಿಸೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಹಕಾರ ಶಿಕ್ಷಣ ತರಬೇತಿ ಯುವಜನ ಕಾರ್ಯಕ್ರಮಗಳು ಪರಿಣಾಮಕಾರಿ ಎನಿಸಿವೆ ಹಾಗೂ ಮಾದರಿಯಾಗಿವೆ.

**ವಿಶೇಷ ಪ್ರಯತ್ನ :** ಯುವಜನರ ಸೇವೆಯನ್ನು ಬಳಸಿಕೊಳ್ಳುವತ್ತ ಸಹಕಾರ ಕ್ಷೇತ್ರ ವಿಶೇಷ ಪ್ರಯತ್ನಗಳನ್ನು ಮಾಡಬೇಕಿದೆ. ಆಹಾರ ಉತ್ಪಾದನೆ, ವಿತರಣೆ, ಸಾರಿಗೆ, ಗೃಹ ನಿರ್ಮಾಣ, ಬ್ಯಾಂಕಿಂಗ್, ಹೈನೋದ್ಯಮಗಳಲ್ಲಿ ಯುವಜನರಿಗೆ ಅಧಿಕ ಅವಕಾಶಗಳನ್ನು ಕಲ್ಪಿಸಿಕೊಡುವತ್ತ ಪ್ರಯತ್ನಗಳಾಗಬೇಕು. ನೂರಾರು ಉದ್ಯಮಗಳಲ್ಲಿ ಯುವಜನರು ತೊಡಗಿಸಿಕೊಳ್ಳಲು ಅವಕಾಶಗಳಿರುವಾಗ ಸಹಕಾರಿ ವ್ಯವಸ್ಥೆ ಅಂತಹ ಅವಕಾಶಗಳನ್ನು ಯುವಜನರ ಮುಂದಿಡಬೇಕು.

ಯುವಕರು ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡರೆ ಯುವ ಸಹಕಾರಿಗಳಾದರೆ ಸಹಕಾರ ಕ್ಷೇತ್ರ ಇನ್ನಷ್ಟು ಸಮೃದ್ಧವಾಗುವುದರಲ್ಲಿ ಸಂಶಯವೇ ಇಲ್ಲ. ಯುವಜನತೆ ಜಾತಿ, ಭೇಧ, ಬಾವ ಮರೆತು ಸಹಕಾರ ಧ್ಯೇಯವಾದ "ಎಲ್ಲಾರಿಗಾಗಿ ಪ್ರತಿಯೊಬ್ಬರು, ಪ್ರತಿಯೊಬ್ಬರಿಗಾಗಿ ಎಲ್ಲರೂ" ಎಂಬ ವಾಕ್ಯದಂತೆ ನಡೆಯುತ್ತಿದೆ. ನುಡಿದರೆ ಸಹಕಾರ ತತ್ವಗಳಾದಾರದಲ್ಲಿ ಕೆಲಸ ನಿರ್ವಹಿಸುವುದು ಸೂಕ್ತ. ಆದ್ದರಿಂದ ಸಹಕಾರ ಮತ್ತು ಕ್ರೀಡೆ ಹಾಗೂ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿರುವ ಯುವಕರ ಸಂಘಗಳು ಮತ್ತು ಯುವತಿಯರ ಮಂಡಳಿಗಳಲ್ಲಿ ಸಹಕಾರ ಚಟುವಟಿಕೆಗಳು ನಡೆಯುವಂತೆ ನೋಡಿಕೊಳ್ಳಬೇಕು. ಯುವ ಸಂಘಗಳ ಒಕ್ಕೂಟಗಳಲ್ಲಿ ಅರಿವು ಮೂಡಿಸಿ ಯುವಕರಿಗೆ ಯೋಗ್ಯ ತರಬೇತಿ ಮತ್ತು ಸಹಕಾರ ಶಿಕ್ಷಣವನ್ನು ಒದಗಿಸಬೇಕು. ಇನ್ನೂ ಗ್ರಾಮೀಣ ಭಾಗಗಳಲ್ಲಿ ಯುವ ಸಹಕಾರ ಸಂಘಗಳನ್ನು ಪ್ರಾರಂಭಿಸುವ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಯುವ ಪತ್ತಿನ ಸಹಕಾರ ಸಂಘಗಳು, ಯುವ ವಿವಿದೋದ್ದೇಶ ಸಹಕಾರ ಸಂಘಗಳು, ಯುವ ಹಾಲು ಉತ್ಪಾದಕರ ಸಹಕಾರ ಸಂಘಗಳು, ಯುವ ಗೃಹ ನಿರ್ಮಾಣ ಸಹಕಾರ ಸಂಘಗಳು, ಕೈಗಾರಿಕಾ ಯುವಕರ ಸಹಕಾರಿ ಸಂಘಗಳನ್ನು ಪ್ರಾರಂಭಿಸುವುದಕ್ಕೆ ನಾವು ಚಿಂತನೆಯನ್ನು ಮಾಡಬಹುದಾಗಿದೆ. ಏಕೆಂದರೆ ಸಹಕಾರ ಕ್ಷೇತ್ರದ ವ್ಯಾಪ್ತಿ ವಿಶಾಲವಾದುದು ಪ್ರಾಥಮಿಕ ಹಂತದಿಂದ ರಾಷ್ಟ್ರಮಟ್ಟದವರೆಗೂ ಸಹಕಾರ ಕ್ಷೇತ್ರ ತನ್ನ ವ್ಯಾಪ್ತಿಯನ್ನು ಆವರಿಸಿಕೊಂಡಿದೆ. ಈ ವಿಸ್ತಾರ–ವಿಶಾಲವಾದ ಕ್ಷೇತ್ರದಲ್ಲಿ ಯುವಜನತೆ ಸಕ್ರಿಯವಾಗಿ ಪಾಲ್ಗೊಂಡಿದ್ದೆ ಆದಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿ ಖಚಿತ ಎಂದರೆ ತಪ್ಪಾಗಲಾರದು.

ಯುವಜನತೆಯಲ್ಲಿ ನಾಯಕತ್ವದ ಗುಣ ಹೆಚ್ಚಾಗಿರುತ್ತದೆ ವ್ಯಕ್ತಿತ್ವ ವಿಕಸನಗೊಳ್ಳುವ ಮತ್ತು ಬೌದ್ಧಿಕ ಮಟ್ಟ ವೃದ್ಧಿಯಾಗುವ ಶಕ್ತಿ ಯವ್ವನಾವಸ್ಥೆಯೆ ಇರುತ್ತದೆ. ಜವಬ್ದಾರಿಗಳನ್ನು ಹೊತ್ತಿಕೊಳ್ಳುವ ಮನೋಭಾವ, ಚಿಂತನೆ ಮಂಥ ವ್ಯಕ್ತಿತ್ವ ಯುವಕರಲ್ಲಿ ಹೆಚ್ಚಾಗಿರುತ್ತದೆ. ಈ ಸಾಮರ್ಥ್ಯವಿರುವ ಯುವಶಕ್ತಿ ಪ್ರಸ್ತುತ ಕಂಪ್ಯೂಟರ್ ಯುಗದಲ್ಲಿ ಅಂಗೈಯಲ್ಲೋ ಆಳುವ ನಾಯಕತ್ವದ ಗುಣ ಯುವಜನತೆಯಲ್ಲಿ ಕಾಣಬಹುದು ಹಾಗಾಗಿ ಶಿಕ್ಷಣ ವ್ಯವಸ್ಥೆಯಲ್ಲಿಯೇ ಶಾಲಾ–ಕಾಲೇಜು ಹಂತದಲ್ಲಿಯೇ ಸಹಕಾರ ಶಿಕ್ಷಣ ಅಥವಾ ಪಠ್ಯಕ್ರಮವನ್ನು ಅಳವಡಿಸುವುದು ಅತ್ಯಾವಾಶಕವಾಗಿದೆ. ಹೀಗಾಗಿ ಯುವಜನರಲ್ಲಿ ಹೊಸ ಸಾಧ್ಯತೆಗಳ ಬಗ್ಗೆ ಮನವರಿಕೆಯ ಜೊತೆ–ಜೊತೆಗೆ ತಿಳುವಳಿಕೆ ನೀಡಿದಂತಾಗುತ್ತದೆ. ಸಹಕಾರ ಕ್ಷೇತ್ರದ ಸವಾಲುಗಳನ್ನು ಸಾಧಕ–ಬಾಧಕಗಳ ಬಗ್ಗೆ ಅಧ್ಯಯನ ನಡೆಸಿ ಸಂಶೋಧನೆ ನಡೆಸಲು ವಿಶ್ವವಿದ್ಯಾಲಯಗಳ ಮೂಲಕ ಯುವಜನರನ್ನು ಉತ್ತೇಜಿಸಿದರೆ ಯುವಕರಿಗೆ ಉದ್ಯೋಗವು ಒದಗಿಸಿದಂತಾಗುತ್ತದೆ. ಹಾಗಾಗಿಯೇ ಕೇಂದ್ರ ಸರ್ಕಾರವು ಸ್ವಯಂ ಉದ್ಯೋಗ ಸೃಷ್ಟಿಗೆ ಮತ್ತು ಕೌಶಲ್ಯಾಭಿವೃದ್ಧಿಗೆ ಆತ್ಮ ನಿರ್ಭರ ಯೋಜನೆಯ ಮೂಲಕ ಯುವಜನರಿಗೆ ತರಬೇತಿ ನೀಡುವ ಅಗತ್ಯವಿದೆ.

ನಮ್ಮ ರಾಷ್ಟ್ರದ ಮುಂದಿನ ಭವಿಷ್ಯ ಉಜ್ವಲವಾಗಬೇಕಾದರೆ ಸಹಕಾರ ಚಳವಳಿ ಸದೃಢವಾಗಬೇಕು. ಸಹಕಾರ ಚಳವಳಿ ಸದೃಢವಾಗಬೇಕಾದರೆ ಯುವಜನರು ಕೈಜೋಡಿಸಬೇಕು. ಯುವಜನರು ಕೈಜೋಡಿಸಲು ಸಹಕಾರಿ ಮುಖಂಡರು ಅಗತ್ಯ ಮಾರ್ಗದರ್ಶನ ನೀಡಬೇಕು. ಇವುಗಳಿಂದ ಮಾತ್ರವೇ ಭವ್ಯ ಭಾರತ ನಿರ್ಮಾಣ ಸಾಧ್ಯ ಎಂಬುದನ್ನು ಯುವಜನರು ಅರಿತುಕೊಳ್ಳಬೇಕಾದ ಸಮಯ ಇದಾಗಿದೆ.



# ಸಹಕಾರ ಮಾರ್ಗದರ್ಶಿ :
# ಆಧುನಿಕ ಸಹಕಾರ ಚಳುವಳಿಯ ಉಗಮ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

... ಹಿಂದಿನ ಸಂಚಿಕೆಯಿಂದ

## ಇತರೆ ಅಂಶಗಳು

**1. ಷೇರು ಧನ (Share Capital) :** ಒಬ್ಬ ವ್ಯಕ್ತಿಯೂ ಸಹಕಾರ ಸಂಘದ ಸದಸ್ಯನಾಗಬೇಕಾದರೆ ಅವನು ಸದರಿ ಸಂಘದ ಬೈಲಾ ನಿಯಮದ ಪ್ರಕಾರ ಪಾವತಿಸಬೇಕಾದ ಒಂದು ಷೇರಿನ ಮೌಲ್ಯವನ್ನು ಷೇರುಧನ ಎನ್ನಲಾಗುತ್ತದೆ. ಇದನ್ನು ಪೂರ್ತಿಯಾಗಿ ಪಾವತಿಸಿದರೆ ಮಾತ್ರ ಸದಸ್ಯತ್ವಕ್ಕೆ ಅರ್ಹತೆ ಇರುತ್ತದೆ. ಇದು ಸಹಕಾರ ಸಂಘಗಳಿಗೂ ಅನ್ವಯಿಸುತ್ತದೆ. ಒಂದು ಸಂಘವು ಮತ್ತೊಂದು ಸಂಘದಲ್ಲಿ ಸದಸ್ಯತ್ವ ಪಡೆಯಬೇಕಾದರೆ ಕನಿಷ್ಠ ಒಂದು ಷೇರು ಹಣವನ್ನು ಪಾವತಿಸಬೇಕಾಗಿರುತ್ತದೆ. ಹೆಚ್ಚುವರಿ ಷೇರನ್ನು ಹೊಂದಲು ಅವಕಾಶವಿರುತ್ತದೆ.

**2. ಸುಸ್ತಿ ಸಾಲ (Over Due Loan) :** ಹಣಕಾಸು ಸಂಸ್ಥೆಗೆ ನಿಗಧಿಪಡಿಸಲಾದ ಅವಧಿಯೊಳಗಾಗಿ ಪಾವತಿಸದ ಕಂತು/ಸಾಲವನ್ನು ಸುಸ್ತಿ ಕಂತು/ಸಾಲವೆಂದು ಕರೆಯಲಾಗುತ್ತದೆ.

**3. ಸಾಲದ ಮಿತಿ (Credit Limit) :** ಒಬ್ಬ ವ್ಯಕ್ತಿಗೆ/ಸಂಘಕ್ಕೆ ಅರ್ಹತೆ ಆಧಾರದ ಮೇಲೆ ಬ್ಯಾಂಕು ಸಾಲ ಮಂಜೂರ ಮಾಡಿ ಅಗತ್ಯವಾದಾಗ ಉಪಯೋಗಿಸಿಕೊಳ್ಳಲು ನಿಗಧಿ ಪಡಿಸುವಂತಹ ಸಾಲದ ಮಿತಿ.

**4. ರೂಪೆ ಕಾರ್ಡ್ (RuPay Card) :** ಇದು ಭಾರತದೊಳಗೆ ಮಾತ್ರ ಬಳಕೆ ಮಾಡಲು ಅವಕಾಶವಿರುವ ಬ್ಯಾಂಕ್‌ಗಳಿಂದ ನೀಡಲ್ಪಟ್ಟ ಡೆಬಿಟ್/ಕ್ರೆಡಿಟ್ ಕಾರ್ಡ್ ಆಗಿರುತ್ತದೆ. ಭಾರತದ ರಾಷ್ಟ್ರೀಯ ಪಾವತಿ ನಿಗಮವು (National Payments Corporation of India) ದಿನಾಂಕ : 26–03–2012ರಂದು ಯೋಜನೆಯನ್ನು ಆರಂಭಿಸಿರುತ್ತದೆ. ಆರ್‌ಬಿಐನ ಅಪೇಕ್ಷಯಂತೆ ಭಾರತದೊಳಗಿನ ಪಾವತಿ ವ್ಯವಸ್ಥೆ (Payments System) ಇದಾಗಿರುತ್ತದೆ.

**5. ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿ (District Level Technical Committee) :** ಆಯಾ ಜಿಲ್ಲೆಗಳಲ್ಲಿ ಬೆಳೆಯುವಂತಹ ಬೆಳೆಗಳಿಗೆ ತಗಲುವ ವೆಚ್ಚಗಳನ್ನು ಎಕರೆಗೆ ಇಂತಿಷ್ಟೆಂದು ಈ ಸಮಿತಿಯು ನಿರ್ಧರಿಸಿ ಅದನ್ನು ಬ್ಯಾಂಕುಗಳಿಗೆ ತಿಳಿಸುತ್ತದೆ (Scale of Finance), ಸಮಿತಿಯು ನೀಡಿದ ಬೆಳೆವಾರು ತಗಲುವ ವೆಚ್ಚಗಳನ್ನು ಆಧರಿಸಿ ಬೆಳೆ ಸಾಲದ ಮೊತ್ತವನ್ನು ನಿರ್ಧರಿಸಲಾಗುವುದು. ಪ್ರಸ್ತುತ ಜಿಲ್ಲಾ ಬ್ಯಾಂಕಿನ ಅಧ್ಯಕ್ಷರು ಈ ಸಮಿತಿಯ ಅಧ್ಯಕ್ಷರಾಗಿದ್ದು, ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಕೃಷಿ, ತೋಟಗಾರಿಕೆ, ರೇಷ್ಮೆ, ನಬಾರ್ಡ್ ಜಿಲ್ಲಾ ಮ್ಯಾನೇಜರ್, ಲೀಡ್‌ಬ್ಯಾಂಕ್ ಮ್ಯಾನೇಜರ್, ರೈತ ಪ್ರತಿನಿಧಿಗಳು ಈ ಸಮಿತಿಯಲ್ಲಿ ಇರುತ್ತಾರೆ.

**6. ಕ್ರಮಿಕ ಪತ್ತಿನ ಮಿತಿ ತಃಖ್ತೆ (Normal Credit Limit Statement - NCLS) :** ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ತಮ್ಮ ಸದಸ್ಯರುಗಳ ಭೂ ಇಡುವಳಿ ವಿವರಗಳನ್ನು ತಃಖ್ತೆಯಲ್ಲಿ ದಾಖಲಿಸುತ್ತಾರೆ. ಜಿಲ್ಲಾ ಬ್ಯಾಂಕ್ ವಿವಿಧ ಬೆಳೆಗಳಿಗೆ ನಿಗಧಿಪಡಿಸಲಾದ ಬೆಳೆವಾರು ಸಾಲದ ಮಿತಿಯನ್ನು ತಿಳಿಸುತ್ತದೆ. ಸದಸ್ಯರ ಭೂ ಇಡುವಳಿ ಮತ್ತು ಸಾಲದ ಮಿತಿಯನ್ನು ಆಧರಿಸಿ ಆ ವರ್ಷಕ್ಕೆ ಸಂಘದ ಸದಸ್ಯರಿಗೆ ಅಗತ್ಯವಾದ ಸಾಲದ ಮೊತ್ತವನ್ನು ಲೆಕ್ಕ ಹಾಕಿ, ನಿಗಧಿತ ನಮೂನೆಯಲ್ಲಿ ಮಾಹಿತಿ ಸಿದ್ಧಪಡಿಸಿ, ಆಡಳಿತ ಮಂಡಳಿ ಒಪ್ಪಿಗೆ ಪಡೆದು ಜಿಲ್ಲಾ ಬ್ಯಾಂಕಿನ ಮೇಲ್ವಿಚಾರಕರ ಶಿಫಾರಸ್ಸಿನೊಡನೆ ಸಂಘವು ಬ್ಯಾಂಕಿಗೆ ಸಲ್ಲಿಸುತ್ತದೆ. ಈ ತಃಖ್ತೆಯನ್ನು ಕ್ರಮಿಕ ಪತ್ತಿ ತಃಖ್ತೆ ಎಂದು ಕರೆಯಲಾಗುತ್ತದೆ. ಇದನ್ನು ಮೂರು ವರ್ಷಕ್ಕೊಮ್ಮೆ ಸಿದ್ಧಪಡಿಸಲಾಗುತ್ತದೆ ಹಾಗೂ ಹೊಸದಾಗಿ ಸೇರ್ಪಡೆಯಾದ ಸದಸ್ಯರಿಗೆ ಸಂಬಂಧಿಸಿದ ತಃಖ್ತೆಯನ್ನು ಸಂದರ್ಭನುಸಾರ ಬ್ಯಾಂಕಿಗೆ ಸಲ್ಲಿಸಲಾಗುತ್ತದೆ. ಈ ತಃಖ್ತೆ ಮತ್ತು ಸಂಘದ ಅರ್ಹತೆಯನ್ನು ಆಧರಿಸಿ ಜಿಲ್ಲಾ ಬ್ಯಾಂಕು ಬೆಳೆ ಸಾಲವನ್ನು ಅರ್ಹ ಸದಸ್ಯರಿಗೆ ಮಂಜೂರು ಮಾಡಿ ಬಿಡುಗಡೆ ಮಾಡುತ್ತದೆ.

**7. ಬೆಳೆ ವಿಮೆ ಯೋಜನೆ (Crop Insurance Scheme) :** ಪ್ರಸ್ತುತ ಈ ಬೆಳೆ ವಿಮೆ ಯೋಜನೆಯನ್ನು ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಎಂದು ಕರೆಯಲಾಗುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಂಘಗಳಿಂದ ರೈತರು ಪಡೆಯುವ ಬೆಳೆ ಸಾಲಕ್ಕೆ ವಿಮೆ ಮಾಡಿಸಲಾಗುತ್ತದೆ. ಬೆಳೆಗಳ ಆಧರಿತವಾಗಿ ನಿಗಧಿಪಡಿಸಲಾದ ವಿಮೆ ಕಂತನ್ನು ಸದಸ್ಯರಿಗೆ ಮಂಜೂರಾದ ಸಾಲದಲ್ಲಿ ಮುರಿದುಕೊಳ್ಳಲಾಗುವುದು. ಪ್ರಕೃತಿ ವಿಕೋಪದಿಂದ ಬೆಳೆ ನಷ್ಟವಾದಾಗ ಈ ಯೋಜನೆಯಡಿಯಲ್ಲಿ ಪರಿಹಾರವನ್ನು ಬೆಳೆ ನಷ್ಟದ ಪ್ರಮಾಣವನ್ನು ಆಧರಿಸಿ ನೀಡಲಾಗುವುದು. ಎಲ್ಲಾ ಮುಂಗಾರು ಬೆಳೆಗಳಿಗೆ ಒಂದೇ ರೀತಿಯಾಗಿ ಶೇ.2 ಮತ್ತು ರಬಿ ಬೆಳೆಗಳಿಗೆ ಶೇ.1.5 ರಷ್ಟು ವಿಮೆ ಕಂತನ್ನು ನಿಗಧಿಪಡಿಸಲಾಗಿದೆ. ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳಿಗೆ ಶೇ.5 ರಷ್ಟು ವಿಮಾ ಕಂತು ಇರುತ್ತದೆ. ವಿಮೆ ಕಂತು ಕಡಿಮೆ ಇದ್ದು ಪೂರ್ಣ ವಿಮೆಯ ಬಾಕಿ ಕಂತನ್ನು ಬೆಳೆ ನಷ್ಟವಾದಾಗ ಪೂರ್ಣ ನಷ್ಟವನ್ನು ಭರಿಸಲು ಸರ್ಕಾರವು ವಿಮೆ ಸಂಸ್ಥೆಗೆ ಪಾವತಿಸುತ್ತದೆ. ಪ್ರಸ್ತುತ ಇರುವ ಯೋಜನೆಯನ್ನು ದಿ: 18–05–2016ರಂದು ಆರಂಭಿಸಲಾಗಿರುತ್ತದೆ.

**8. ಸ್ವಸಹಾಯ ಗುಂಪುಗಳು (Self Help Groups - SHGs) :** ಸಮಾನ ಆಸಕ್ತಿ ಮತ್ತು ಸಮಾನ ಆರ್ಥಿಕ/ಸಾಮಾಜಿಕ ಹಿನ್ನಲೆಯುಳ್ಳ 10

**ಸಮಾನ ಚಟುವಟಿಕೆ ಮತ್ತು ಪರಸ್ಪರ ವಿಶ್ವಾಸವುಳ್ಳ ಒಂದೇ ಗ್ರಾಮದ ಐದರಿಂದ ಹತ್ತು ಜನ ಸದಸ್ಯರುಳ್ಳ ಗುಂಪು ಇದಾಗಿರುತ್ತದೆ. ನಬಾರ್ಡ್ ಈ ಸಂಘಗಳ ರಚನೆ ಬಗ್ಗೆ ಮಾರ್ಗದರ್ಶನ ಮತ್ತು ಉತ್ತೇಜನ ನೀಡಿರುತ್ತದೆ. ಈ ಯೋಜನೆಯಲ್ಲಿ ಒಬ್ಬ ಸದಸ್ಯನಿಗೆ ನೀಡದ ಸಾಲಕ್ಕೆ ಇತರರು ಹೊಣೆಗಾರರಾಗುತ್ತಾರೆ. ಇಂತಹ ಗುಂಪುಗಳಲ್ಲಿ ಮುಖ್ಯವಾಗಿ ಉತ್ಪಾದನಾ ಸಾಲವನ್ನು ನೀಡಲಾಗುತ್ತದೆ.**

ರಿಂದ 20 ಜನರು ಸೇರಿ ರಚಿಸುವುದೇ ಸ್ವಸಹಾಯ ಸಂಘವಾಗಿರುತ್ತದೆ. ಸದಸ್ಯತ್ವವು ಸ್ವಇಚ್ಛೆಯಿಂದ ಕೂಡಿರಬೇಕು. ಬ್ಯಾಂಕುಗಳು, ಇತರೆ ಹಣಕಾಸು ಸಂಸ್ಥೆ, ಸರ್ಕಾರೇತರ ಸಂಸ್ಥೆಗಳು ಈ ಸಂಘಗಳ ರಚನೆಗೆ ಪ್ರೋತ್ಸಾಹಿಸಬಹುದು. ಮುಖ್ಯ ಉದ್ದೇಶವು ಉಳಿತಾಯ, ಸದಸ್ಯರ ಆರ್ಥಿಕ ಪ್ರಗತಿ ಹಾಗೂ ಸ್ವಸಹಾಯ ಮತ್ತು ಪರಸ್ಪರ ಸಹಾಯ ಆಗಿರುತ್ತದೆ.

ಸದಸ್ಯರು ನಿಗಧಿತ ಸ್ಥಳದಲ್ಲಿ ಕಾಲಕಾಲಕ್ಕೆ ಸಭೆ ಸೇರಿ ಹಾಜರಾತಿ ದಾಖಲಿಸಬೇಕು. ಸದಸ್ಯರು ಉಳಿತಾಯ ಮಾಡಬೇಕು, ಉಳಿತಾಯ ಮಾಡಿದ ಹಣದಿಂದಲೇ ಸದಸ್ಯರಿಗೆ ಸಾಲ ನೀಡಿ ಬಡ್ಡಿ ಸಮೇತ ವಸೂಲಿ ಮಾಡಬಹುದು. ಸದಸ್ಯರಲ್ಲಿ ಒಬ್ಬರು ನಾಯಕರು ಮತ್ತೊಬ್ಬರು ಉಪನಾಯಕರು ಇದ್ದು ಸದಸ್ಯರೊಳಗೆ ಒಬ್ಬರು ಲೆಕ್ಕಪುಸ್ತಕಗಳನ್ನು ಠರಾವು ಪುಸ್ತಕ ಒಳಗೊಂಡಂತೆ ಬರೆಯಬೇಕು. ಬ್ಯಾಂಕುಗಳಿಂದ ಸ್ವಸಹಾಯ ಗುಂಪುಗಳ ಆರ್ಥಿಕ ಚಟುವಟಿಕೆಗಳನ್ನು ಆಧರಿಸಿ ವೈಯಕ್ತಿಕವಾಗಿ ಅಥವಾ ಗುಂಪಿಗೆ ಸಾಲ ನೀಡಲು ಅವಕಾಶವಿರುತ್ತದೆ. ನಬಾರ್ಡ್ ಈ ಸಂಘಗಳ ರಚನೆಯ ಉತ್ತೇಜನ ನೀಡುವುದರ ಜೊತೆಗೆ ಈ ಯೋಜನೆಯಡಿಯಲ್ಲಿ ಬ್ಯಾಂಕುಗಳಿಗೆ ಸಾಲದ ಸೌಲಭ್ಯವನ್ನು ಒದಗಿಸುತ್ತದೆ.

**9. ಜಂಟಿ ಹೊಣೆಗಾರಿಕೆ ಗುಂಪುಗಳು (Joint Liability Groups - JLGs) :** ಸಮಾನ ಚಟುವಟಿಕೆ ಮತ್ತು ಪರಸ್ಪರ ವಿಶ್ವಾಸವುಳ್ಳ ಒಂದೇ ಗ್ರಾಮದ ಐದರಿಂದ ಹತ್ತು ಜನ ಸದಸ್ಯರುಳ್ಳ ಗುಂಪು ಇದಾಗಿರುತ್ತದೆ. ನಬಾರ್ಡ್ ಈ ಸಂಘಗಳ ರಚನೆ ಬಗ್ಗೆ ಮಾರ್ಗದರ್ಶನ ಮತ್ತು ಉತ್ತೇಜನ ನೀಡಿರುತ್ತದೆ. ಈ ಯೋಜನೆಯಲ್ಲಿ ಒಬ್ಬ ಸದಸ್ಯನಿಗೆ ನೀಡದ ಸಾಲಕ್ಕೆ ಇತರರು ಹೊಣೆಗಾರರಾಗುತ್ತಾರೆ. ಇಂತಹ ಗುಂಪುಗಳಲ್ಲಿ ಮುಖ್ಯವಾಗಿ ಉತ್ಪಾದನಾ ಸಾಲವನ್ನು ನೀಡಲಾಗುತ್ತದೆ.

**10. ಆರ್ಥಿಕ ಸೇರ್ಪಡೆ (Financial Inclusion) :** ಆರ್ಥಿಕವಾಗಿ ದುರ್ಬಲವಾದವರು, ಗ್ರಾಮೀಣ ಮತ್ತು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಅನಕ್ಷರಸ್ಥರು, ನಿರುದ್ಯೋಗಿಗಳು, ಇತ್ಯಾದಿ ವರ್ಗದ ಜನರಿಗೆ ಬ್ಯಾಂಕುಗಳ ಸೇವೆಗಳು ದೊರೆಯುತ್ತಿಲ್ಲ ಇಂತವರಿಗೆ ಬ್ಯಾಂಕುಗಳಲ್ಲಿ ಖಾತೆ ತೆರೆಸಿ ವಿವಿಧ ಹಣಕಾಸು ಸೇವೆಗಳು ಸುಲಭವಾಗಿ ದೊರೆಯುವಂತೆ ಕ್ರಮವಹಿಸುವುದೆ "ಆರ್ಥಿಕ ಸೇರ್ಪಡೆ" ಕಾರ್ಯಕ್ರಮದ ಗುರಿಯಾಗಿರುತ್ತದೆ. ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ಸಾಲಗಳು; ಜೀವ ವಿಮೆ, ಆರೋಗ್ಯ ವಿಮೆ, ವೈದ್ಯಾಪ್ಯ ವೇತನ ಮುಂತಾದ ಹಣಕಾಸು ಸೌಲಭ್ಯಗಳು ಬ್ಯಾಂಕುಗಳ ಮೂಲಕ ದೊರೆಯಬೇಕೆಂಬುದ ಸಹ ಇದರ ಗುರಿಯಾಗಿರುತ್ತದೆ. ಅಲ್ಲದೆ, ಹಣಕಾಸು ನಿರ್ವಹಣೆ ಮತ್ತು ಆರ್ಥಿಕ ಅಭಿವೃದ್ಧಿ ಇದರ ಗುರಿಯಾಗಿದ್ದು ಕೇಂದ್ರ ಸರ್ಕಾರ, ಆರ್‌ಬಿಐ, ನಬಾರ್ಡ್, ಬ್ಯಾಂಕುಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಬ್ಯಾಂಕಿನಲ್ಲಿ ವ್ಯವಹರಿಸಿದ ಹಿಂದುಳಿದವರ ಆರ್ಥಿಕ ಸೇರ್ಪಡೆಗೆ ಉತ್ತೇಜಿಸುತ್ತಿವೆ.

ಪ್ರಸ್ತುತ ಈ ಯೋಜನೆಯನ್ನು ಪ್ರಧಾನ ಮಂತ್ರಿಗಳ ಜನ್‌ಧನ್ ಯೋಜನೆ (PMJDY) ಎಂದು ಹೆಸರಿಸಲಾಗಿದೆ. ಈ ಖಾತೆಯನ್ನು ತೆರೆಯಲು ಬ್ಯಾಂಕಿನವರು ಖಾತೆಯಲ್ಲಿ ಆರಂಭಿಕವಾಗಿ ಕನಿಷ್ಟ ಹಣ ಇಡಬೇಕೆಂದು ಷರತ್ತು ವಿಧಿಸುವಂತಿಲ್ಲ.

**11. ಕಿರು ಹಣಕಾಸು (Micro Finance) :** ಆರ್ಥಿಕವಾಗಿ ದುರ್ಬಲವಾದ ಜನರಿಗೆ ಬ್ಯಾಂಕು/ಹಣಕಾಸು ಸಂಸ್ಥೆಗಳು ನೀಡುವ ಸಣ್ಣ ಪ್ರಮಾಣದ ಸಾಲಗಳನ್ನು ಕಿರು ಹಣಕಾಸು (Micro Finance) ಎಂದು ಕರೆಯಲಾಗುತ್ತದೆ. ಸರ್ಕಾರದಿಂದ ನೀಡುವ ಸಣ್ಣ ಸಾಲಗಳು ಇದರಲ್ಲಿ ಸೇರಿರುತ್ತವೆ. ಇಂತಹ ಸಾಲಗಳಿಗೆ ಬ್ಯಾಂಕುಗಳು ಹೆಚ್ಚಿನ ಭದ್ರತೆ ಕೇಳುವುದಿಲ್ಲ. ಕಡಿಮೆ ಬಡ್ಡಿದರ ಹಾಗೂ ಸುಲಭ ಕಂತುಗಳಲ್ಲಿ ಮರುಪಾವತಿಗೆ ಅವಕಾಶವಿರುತ್ತದೆ.

**12. ಠೇವಣಿ ಹಣ ಮತ್ತು ಸಾಲ ಖಾತರಿ ನಿಗಮ (Deposit Insurance & Credit Guarantee Corporation) :** ಈ ನಿಗಮವನ್ನು 1978ರಲ್ಲಿ ಸ್ಥಾಪಿಸಿದ್ದು ಇದರ ಕೇಂದ್ರ ಕಚೇರಿಯು ಮುಂಬೈನಲ್ಲಿದೆ. ಇದು ಆರ್.ಬಿ.ಐನ ಅಂಗ ಸಂಸ್ಥೆ ಆಗಿರುತ್ತದೆ. ಈ ಸಂಸ್ಥೆಯು ವಾಣಿಜ್ಯ ಬ್ಯಾಂಕುಗಳ, ಸಹಕಾರ ಬ್ಯಾಂಕುಗಳ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಠೇವಣಿದಾರರ (ಉಳಿತಾಯ/ಚಾಲ್ತಿ/ಅವಧಿ/ ಆವರ್ತ ಠೇವಣಿಗಳು) ರೂ.1.00 ಲಕ್ಷ ವರೆಗಿನ ಠೇವಣಿಗಳಿಗೆ ವಿಮೆ ರಕ್ಷೆ ನೀಡುತ್ತದೆ. ವಿಮೆ ರಕ್ಷೆ ಪಡೆಯಲು ಬ್ಯಾಂಕುಗಳು ನಿಗಮದಲ್ಲಿ ಸದಸ್ಯತ್ವ ನೊಂದಾಯಿಸಿಕೊಳ್ಳಬೇಕು.

ಬ್ಯಾಂಕುಗಳು ಠೇವಣಿದಾರರಿಗೆ ಹಣ ಪಾವತಿಸಲು ವಿಫಲವಾದರೆ ಸಂಸ್ಥೆಯ ಠೇವಣಿ ವಿಮಾ ನಿಧಿಯಿಂದ ಪ್ರತಿ ಠೇವಣಿದಾರರಿಗೆ ರೂ. 1.00 ಲಕ್ಷದ ವರೆಗೆ ಹಣ ಪಾವತಿ ಮಾಡಲಾಗುತ್ತಿದೆ. ಬ್ಯಾಂಕುಗಳು ಪ್ರತಿ ವರ್ಷವು ವಿಮೆ ರಕ್ಷೆಗೆ ಒಳಪಡುವ ಠೇವಣಿ ಹಣದ ಮೇಲೆ ವಿಮೆ ಶುಲ್ಕವನ್ನು ನಿಗಮಕ್ಕೆ ಪಾವತಿಸಬೇಕು. ನಿಗಮವು ಆರಂಭದಲ್ಲಿ ಬ್ಯಾಂಕುಗಳು ನೀಡಿದ ಸಾಲಗಳಿಗೂ ಖಾತರಿ ನೀಡುತ್ತಿತ್ತು, ಆದರೆ ಈಗ ನೀಡುವುದಿಲ್ಲ.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. 97ನೇ ಸಂವಿಧಾನ ತಿದ್ದುಪಡಿಯಲ್ಲಿ ರಾಜ್ಯಮಟ್ಟದ ಶೃಂಗ ಸಹಕಾರ ಸಂಘಗಳ ಆಡಳಿತ ಮಂಡಲಿ ಒಟ್ಟು ನಿರ್ದೇಶಕರ ಸಂಖ್ಯೆಯಲ್ಲಿ ____________ ನಿಯಂತ್ರಿಸಿ ನಿಗಧಿಗೊಳಿಸಿದೆ.**

ಎ) 19
ಬಿ) 20
ಸಿ) 21
ಡಿ) 22

**2. ಸಹಕಾರ ಸಂಘದ ಆಡಳಿತ ಮಂಡಲಿ ನಿಗಧಿತ ಅವಧಿಯಲ್ಲಿ ಚುನಾವಣೆ ನಡೆಸಲು ವಿಫಲವಾದಲ್ಲಿ ಆಡಳಿತ ಮಂಡಲಿಯಲ್ಲಿ ರದ್ದುಗೊಳಿಸಲು ____________ ರವರಿಗೆ ಅಧಿಕಾರವಿರುತ್ತದೆ.**

ಎ) ಸಹಕಾರ ಚುನಾವಣಾ ಪ್ರಾಧಿಕಾರ
ಬಿ) ರಾಜ್ಯ ಸರ್ಕಾರ
ಸಿ) ನಿಬಂಧಕರು
ಡಿ) ಯಾವುದು ಅಲ್ಲ

**3. ಸಹಕಾರ ಸಂಘದ ಆಡಳಿತ ಮಂಡಳಿಯಲ್ಲಿ ರದ್ದುಗೊಳಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಸಿರುವ ಕಲಂ ____________ ಆಗಿದೆ.**

ಎ) ಕಲಂ–29ಸಿ
ಬಿ) ಕಲಂ–30
ಸಿ) ಕಲಂ–30ಬಿ
ಡಿ) ಕಲಂ 31ಎ

**4. ಸಹಕಾರ ಸಂಘಗಳ ಆಡಳಿತ ಮಂಡಲಿ ಸಹಕಾರ ವರ್ಷ ಮುಕ್ತಾಯವಾದ ________ ತಿಂಗಳೊಳಗಾಗಿ ವಿದ್ಯುತ್ತ ತಃಖ್ತೆಗಳಲ್ಲಿನ ಸಕ್ಷಮ ನಿಬಂಧಕರಲ್ಲಿ ಸಲ್ಲಿಸುವುದು ಕಡ್ಡಾಯವಾಗಿದೆ.**

ಎ) ಮೂರು ತಿಂಗಳು
ಬಿ) ಆರು ತಿಂಗಳು
ಸಿ) ಒಂಬತ್ತು ತಿಂಗಳು
ಡಿ) ನಾಲ್ಕು ತಿಂಗಳು

**5. ಸಹಕಾರ ಸಂಘದಲ್ಲಿ ನಿವ್ವಳ ಲಾಭವನ್ನು ಹಂಚುವ ಅಧಿಕಾರ ____________ ದತ್ತವಾಗಿದೆ.**

ಎ) ಆಡಳಿತ ಮಂಡಳಿ
ಬಿ) ಸಾಮಾನ್ಯ ಸಭೆ
ಸಿ) ಉಪ ಸಮಿತಿ
ಡಿ) ಪದಾಧಿಕಾರಿಗಳು

**6. ಸಹಕಾರ ಸಂಘದಲ್ಲಿ ಚುನಾವಣಾ ತಕರಾರು (ದಾವೆ) ಹೂಡಲು ಚುನಾವಣಾ ಫಲಿತಾಂಶ ಘೋಷಿಸಲು ದಿನಾಂಕದಿಂದ ________ ಕಾಲಾವಕಾಶವಿರುತ್ತದೆ.**

ಎ) 60 ದವಸಗಳು
ಬಿ) 15 ದಿವಸಗಳು
ಸಿ) 30 ದಿವಸಗಳು
ಡಿ) 90 ದಿವಸಗಳು

**7. ಸಹಕಾರ ಸಂಘದಲ್ಲಿ ಸಾಮಾನ್ಯ ಸಭೆ ನಡೆಸಲು ಕನಿಷ್ಠ ____________ ದಿವಸಗಳ ಮುಂಚಿತವಾಗಿ ನೋಟಿಸ್ ನೀಡುವುದು ಕಡ್ಡಾಯವಾಗಿದೆ.**

ಎ) ಏಳು ದಿವಸಗಳು
ಬಿ) ಹದಿನೈದು ದಿವಸಗಳು
ಸಿ) ಇಪ್ಪತ್ತೊಂದು ದಿವಸಗಳು
ಡಿ) ಮೂವತ್ತು ದಿವಸಗಳು

**8. ಸಹಕಾರ ಸಂಘದಲ್ಲಿ ಆಡಳಿತ ಮಂಡಲಿ ಸಭೆ (ಚುನಾವಣೆ ಹೊರತುಪಡಿಸಿ) ಕನಿಷ್ಠ ____________ ಸ್ಪಷ್ಟ ದಿನಗಳು ಮುಂಚಿತ ನೋಟಿಸ ನೀಡತಕ್ಕದ್ದು.**

ಎ) ಐದು ದಿವಸಗಳು
ಬಿ) ಏಳು ದಿವಸಗಳು
ಸಿ) ಹತ್ತು ದಿವಸಗಳು
ಡಿ) ಎರಡು ದಿವಸಗಳು

**9. ಸಹಕಾರ ಸಂಘದಲ್ಲಿ ಚುನಾವಣಾ ವೇಳಾ ಪಟ್ಟಿ ಪ್ರಕಟಿಸುವ ಅಧಿಕಾರ ____________ ಇವರಿಗೆ ದತ್ತವಾಗಿರುತ್ತದೆ.**

ಎ) ಮುಖ್ಯ ಕಾರ್ಯ ನಿರ್ವಾಹಕ
ಬಿ) ನಿಬಂಧಕರು
ಸಿ) ಚುನಾವಣಾಧಿಕಾರಿ
ಡಿ) ಸಹಕಾರ ಚುನಾವಣಾ ಪ್ರಾಧಿಕಾರ

**10. ಸಹಕಾರ ಸಂಘದಲ್ಲಿನ ಚುನಾವಣಾ ವೆಚ್ಚವನ್ನು ____________ ರವರಿಂದ ಭರಿಸಲಾಗುತ್ತದೆ.**

ಎ) ಸರ್ಕಾರ
ಬಿ) ನಿಬಂಧಕರು
ಸಿ) ಸಹಕಾರ ಚುನಾವಣಾ ಪ್ರಾಧಿಕಾರ
ಡಿ) ಸಂಬಂಧಿಸಿದ ಸಹಕಾರ ಸಂಘ

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

1 -B , 2 -C , 3 –D , 4 –C , 5 – C, 6 – B, 7 – C, 8 – D, 9 –A , 10 – D